


# ವಾರ್ತಾ ಪ್ರಭ

VARTHA PRABHA KANNADA DAILY · MERA BHARATH MAHAN

ಕನ್ನಡ ದಿನ ಪತ್ರಿಕೆ

ಸಂಪಾದಕ : ಡಾ.ಎನ್.ರಾಜು
ಸಹ ಸಂಪಾದಕ : ರತಿಲಾಲ್ ಬಿ.ಪಟೇಲ್

VARTHA PRABHA
KANNADA DAILY

varthaprabha.dailynews@gmail.com




ಕನ್ನಡ ದಿನಪತ್ರಿಕೆ, ಜನವರಿ–2020 ಶನಿವಾರ 25, ವಾರ್ತಾಪ್ರಭ ಆಂಡ್ರಾಯ್ಡ್ ಆ್ಯಪ್‌ನಲ್ಲೂ ಲಭ್ಯ, Download Paper Boy paperboy ಸಂಪುಟ – 4, ಸಂಚಿಕೆ –297, ಪುಟ – 4, ರೂ – 2/–

# ಮಹಾತ್ಮಾ ಗಾಂಧಿಯವರ 150 ನೇ ಜನ್ಮ ದಿನದೊಂದಿಗೆ 71 ನೇ ಗಣರಾಜ್ಯೋತ್ಸವ ಆಚರಣೆ - ಎಸ್.ಆರ್.ವಿಶ್ವನಾಥ್



ಯಲಹಂಕ : ಈ ಬಾರಿ ರಾಷ್ಟ್ರೀಯ ಹಬ್ಬದೊಂದಿಗೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 150 ನೇ ದೊರೆಯುತ್ತೆ ಜನ್ಮದಿನವೂ ಆಗಮಿಸುತ್ತಿದ್ದು ಗಣರಾಜ್ಯೋತ್ಸವನ್ನು ವಿಶೇ ಷವಾಗಿ ಆಚರಿಸಲಾ ಗುವುದೆಂದು ಯಲಹಂಕ ಶಾಸಕ ಎಸ್ ಆರ್ ವಿಶ್ವನಾಥ್ ತಿಳಿಸಿದರು.

ಯಲಹಂಕದ ಹೊಯ್ಸಳ ಕ್ರೀಡಾಂಗಣದಲ್ಲಿ ಆಯೋ ಜಿಸಿದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಶಾಸಕ ಎಸ್ ಆರ್ ವಿಶ್ವನಾಥ್ ಇದು ಎರಡನೇ ವರ್ಷದ ಅದ್ದೂರಿ ಗಣರಾಜ್ಯೋತ್ಸವ ಆಚರಣೆಯಾಗಿದ್ದು, ಎಲ್ಲ ಅಂಕ ತಾಲ್ಲೂಕು ಕೇಂದ್ರವೆಂದು ನಿಗದಿಯಾದ ಮೇಲೆ ಅದ್ದೂ ರಿಯಾಗಿ ಆಚರಿಸಲಾಗುತ್ತಿದೆ. ಈ ಬಾರಿ ವಿವಿಧ ಇಲಾಖೆಗಳ ಸ್ತಬ್ಧ ಚಿತ್ರಗಳೊಂದಿಗೆ ಬೆಳಿಗ್ಗೆ 7–30 ಕ್ಕೆ ಮಿನಿ ವಿಧಾನಸೌಧದಿಂದ ಹೊರಡುವ ಮೆರವಣಿಗೆ 9 ಗಂಟೆಗೆ ಹೊಯ್ಸಳ ಕ್ರೀಡಾಂಗಣ ತಲುಪುವುದು. ಮಹಾತ್ಮ ಗಾಂಧೀಜಿಯವರ ಭಾವ ಚಿತ್ರದೊಂದಿಗೆ ಸಂವಿಧಾನ ಶಿಲ್ಪಿ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿತ್ರವನ್ನು ಮೆರಣಿಗೆ ಮೂಲಕ ವೇದಿ ಕೆಯಲ್ಲಿ ರಿಸಿ ರಾಷ್ಟ್ರೀಯ ಹಬ್ಬ ವನ್ನು ಆಚರಿಸ ಲಾಗುವುದು.


ಕಾರ್ಯಕ್ರಮದಲ್ಲಿ ಪೊಲೀಸ್ ಬ್ಯಾಂಡ್ ಇರುವಂತೆ ಮತ್ತು ಇದಕ್ಕಾಗಿ ಸಹಕರಿಸುವಂತೆ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ವಿನಂತಿಸಲಾಗಿದೆ.

ಮೆರವಣಿಗೆಯಲ್ಲಿ ಈ ಬಾರಿ ಯಲಹಂಕದ ಎಲ್ಲ ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಲು ಇಚ್ಛೆ ವ್ಯಕ್ತಪಡಿಸಿರುವುದರಿಂದ ಸುಮಾರು 6000 ವಿದ್ಯಾರ್ಥಿಗಳು ಸೇರುವ ಅಂದಾಜಿಸಲಾಗಿದೆ.

ನಾಗರಿಕರು ಸೇರಿದಂತೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಶಾಲಾ ಮಕ್ಕಳಿಗೆ ಕುಡಿಯುವ ನೀರು ಹಾಲು ಬಿಸ್ಕೇಟ್ ಉಪಹಾರದ ವ್ಯವಸ್ಥೆಯನ್ನು ಮಾಡಲಾಗಿದ್ದು ಇದಕ್ಕಾಗಿ ಸರ್ಕಾರದ ಯಾವುದೇ ಅನುದಾನವನ್ನು ಪಡೆಯದೆ ಇಲಾಖೆಗಳ ಅಧಿಕಾರಿಗಳು ಹಾಗೂ ಜನಪ್ರ ತಿನಿಧಿಗಳು ಕಾರ್ಯಕ್ರಮದ ಎಲ್ಲ ಖರ್ಚು ವೆಚ್ಚಗಳನ್ನು ಭರಿಸಲಿದ್ದಾರೆ ಎಂದು ತಿಳಿಸಿದರು.

ಪುಟ 2

## ಮಾಜಿ ಸಿಎಂ ಕುಮಾರಸ್ವಾಮಿ, ನಿಜಗುಣಾನಂದ ಶ್ರೀ ಸೇರಿ 15 ಮಂದಿಗೆ ಜೀವ ಬೆದರಿಕೆ



ಬೆಂಗಳೂರು: ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ, ಬೆಳಗಾವಿ ಬೈಲೂರು ಮಠದ ನಿಜಗುಣಾನಂದ ಶ್ರೀ,ಗಳು ಸೇರಿದಂತೆ ಹದಿನೈದು ಮಂದಿಗೆ ಅಪರಿಚಿತರಿನಿಂದ ಜೀವ ಬೆದರಿಕೆ ಪತ್ರ ಬಂದಿದೆ ಎಂದು ವರದಿಯಾಗಿದೆ.


ಕುಮಾರಸ್ವಾಮಿ, ನಿಜಗುಣಾನಂದ ಶ್ರೀ, ನಿಡುಮಾಮಿಡಿ ವೀರಭದ್ರ ಚೆನ್ನಮಲ್ಲ ಸ್ವಾಮೀಜಿ, ದಿನೇಶ್ ಅಮೀನ್ ಮಟ್ಟು, ಪ್ರಕಾಶ್ ರೈ, ಬಿಟಿ ಲಲಿತಾ ನಾಯಕ್, ಬೃಂದಾ ಜಾರಟ್, ಮತ್ತೂ ಅನೇಕರಿಗೆ ಇದೇ ಜನವರಿ 29ರಂದು "ಸಂಹಾರ" ಮಾಡುವೆನೆಂದು ದಾವಣಗೆರೆಯಿಂದ ಅಪರಿಚಿತನೊಬ್ಬ ಪತ್ರ ರವಾನಿಸಿದ್ದಾನೆ.

ನಿಜಗುಣಾನಂದ ಶ್ರೀಗಳಿಗೆ ಬಂದ ಪತ್ರದಲ್ಲಿ "ಶ್ರೀಗಳೇ ನಿಮ್ಮನ್ನೂ, ನಿಮ್ಮೊಡನಿರುವ ಧರ್ಮದ್ರೋಹಿಗಳನ್ನು ದೇಶದ್ರೋಹಿಗಳನ್ನು ಇದೇ ಜನವರಿ 29ರಂದು ಸಂಹಾರ ಮಾಡಲು ಮಹೂರ್ತ ನಿಗದಿಯಾಗಿದೆ. ನಿಮ್ಮ ಅಂತಿಮ ಯಾತ್ರೆಗೆ ಸಿದ್ದವಾಗಿರಿ, ನೀವು ಮಾತ್ರವಲ್ಲ ಸ್ವಾಮಿಗಳೇ ನಿಮ್ಮೊಡನೆ ಅಂತಿಮ ಯಾತ್ರೆಗೆ ಇವರನ್ನೂ ಸಿದ್ದಗೊಳಿಸಿ, ಇವರೆಲ್ಲರಿಗೆ ನೀವೇ ಹೇಳಿರಿ" ಎಂದು ಹದಿನೈದು ಮಂದಿಯ ಹೆಸರನ್ನು ಸೂಚಿಸಲಾಗಿದೆ.

ಇದಲ್ಲದೆ ಕಡೆಯಲ್ಲಿ ಇವರನ್ನೆಲ್ಲಾ ಸಂಹಾರ ಮಾಡಿಯೇ ಮಾಡುವೆವು ಎಂದೂ ಸೂಚಿಸಿದೆ.

ಕೃಪೆ : ಅಂತರ್ಜಾಲ

## 'ಕೈಗಾರಿಕೆಗಳು ತಮ್ಮ ಉತ್ಪನ್ನಗಳನ್ನು ಅಧಿಕಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತವೆ : ಪ್ರೊ. ಎನ್.ಆರ್. ಶೆಟ್ಟಿ




ಯಲಹಂಕ : 'ಕೈಗಾರಿಕೆಗಳು ತಮ್ಮ ಉತ್ಪನ್ನಗಳನ್ನು ಅಧಿಕಗೊಳಿಸಿಕೊಳ್ಳಲು ಹಾಗೂ ವಿಶ್ವದರ್ಜೆಯ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಅನವರತ ಪ್ರಯತ್ನಿಸುತ್ತಿರುತ್ತವೆ. ಇದಕ್ಕೆ ಅಗತ್ಯವಿ ರುವುದು ನಿರಂತರ ಸಂಶೋಧನೆ. ಈ ನಿಟ್ಟಿನಲ್ಲಿ ಕ್ಷಿಪ್ರಗತಿಯಲ್ಲಿ ಯಶಸ್ಸು ಸಾಧಿಸಲು ವಿವಿಧೆಡೆಗಳಿಂದ ಒಗ್ಗೂಡಿದ ತಂತ್ರಜ್ಞಾನದ ಪ್ರತಿಭಾವಂತರು ನಡೆಸುವ ಸಮಷ್ಟಿ ಪ್ರಯತ್ನವೇ ಹ್ಯಾಕಥಾನ್. ಕ್ರಿಸ್ತಶಕ 2000ದಲ್ಲಿ ಪ್ರಾರಂಭವಾದ ಹ್ಯಾಕಥಾನ್ ಈಗ ಅಂತರಾಷ್ಟ್ರೀಯ ಮಟ್ಟದಲ್ಲೂ ಜರುಗುತ್ತಿದೆ. ಅತ್ಯುತ್ತಮ ಸಾಧನೆ ಮಾಡಿದವರಿಗೆ ಪ್ರಶಸ್ತಿಗಳೂ ಲಭಿಸುತ್ತಿ ರುವುದರಿಂದ ಹ್ಯಾಕಥಾನ್ ಒಂದು ಬೌದ್ಧಿಕ ಕ್ರೀಡೆಯಾಗಿ ಪರಿಣಮಿಸಿದೆ',

ಎಚಿದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎನ್.ಆರ್. ಶೆಟ್ಟಿ ನುಡಿದರು. ಅವರು ಯಲಹಂಕದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ 'ಎನ್.ಎಂ.ಐ.ಟಿ ಹ್ಯಾಕ್ಸ್–2020' ಶೀರ್ಷಿಕೆಯಲ್ಲಿ ಹಮ್ಮಿಕೊಂಡಿರುವ ರಾಷ್ಟ್ರಮಟ್ಟದ ಹ್ಯಾಕಥಾನ್ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರಿದು ಶ್ರೀಯುತರು– ಪುಟ 2

## ಮೂರು ದಿನಗಳಲ್ಲಿ ಸಚಿವ ಸಂಪುಟ ವಿಸ್ತರಣೆ - ಸಿ.ಎಂ



ದೇವನಹಳ್ಳಿ: ದಾವೂಸ್ ಪ್ರವಾಸ ಮುಗಿಸಿಕೊಂಡು ಇಂದು ಮುಖ್ಯ ಮಂತ್ರಿ ಯಡಿಯೂರಪ್ಪ ಬೆಂಗಳೂರಿಗೆ ವಾಪಸ್ ಆಗಿದ್ದಾರೆ.ಪ್ರವಾಸ ಹೋಗುವಾಗ ಹತ್ತು ದಿನ ವ್ಯರ್ತ ಆಗಬಹುದು ಎಂದು ಸ್ವಲ್ಪ ಆತಂಕವಿತ್ತು, ಆದರೆ ಹತ್ತಕ್ಕೂ ಹೆಚ್ಚು ಕಂಪನಿಗಳು ಬೆಂಗಳೂರಿನಲ್ಲಿ ಹೂಡಿಕೆಗೆ ಮುಂದಾಗಿರುವುದರಿಂದ ಪ್ರವಾಸ ಸಂತಸ ತಂದಿದೆ ಹಾಗೂ ದಾವೂಸ್ ಬೇಟಿಯಿಂದ ಮೂರು ತಿಂಗಳಲ್ಲಿ ಲಾಭ ತರಲಿದೆ ಎಂದು ಹರ್ಷ ವ್ಯಕ್ತ ಪಡಿಸಿದ್ದಾರೆ. ಇನ್ನು ಇದೇ ತಿಂಗಳಲ್ಲಿ ಸಚಿವ ಸಂಪುಟ ವಿಸ್ತರಣೆ ಮಾಡುವುದಾಗಿ ಸ್ಪಷ್ಟ ಪಡೆಸಿದ್ದಾರೆ. ಆದರೆ ಚುನಾವಣೆಯಲ್ಲಿ ಗೆದ್ದವರಿಗೆ ಮಾತ್ರ ಸಚಿವ ಸ್ಥಾನ ಎಂದು ಹೇಳುವ ಮೂಲಕ ಗೊಂದಲಗಳಿಗೆ ತೆರೆ ಹೆಳಿದಿದ್ದಾರೆ. ಇನ್ನು ನಾಳೆ ಅಮಿತ್ ಷಾ ಬೆಂಗಳೂರಿಗೆ ಬರಲಿದ್ದು, ಅವರೊಂದಿಗೆ ಚರ್ಚಿಸುವುದಾಗಿ ತಿಳಿಸಿದ್ದಾರೆ.

## ಉಗ್ರರೊಂದಿಗೆ ನಂಟು - ನಕಲಿ ರೈಲು ಟಿಕೆಟ್ ಮಾರಟಗಾರನ ಬಂಧನ

ಬೆಂಗಳೂರು: ನಕಲಿ ರೈಲು ಟಿಕೆಟ್ ಸೃಷ್ಟಿ ಮಾಡಿ ಮಾರಾಟ ಮಾಡುತಿದ್ದ ಗುಲಾಮ್ ಮುಸ್ತಾಫ್ ನನ್ನು ಇದೇ ತಿಂಗಳ 8 ರಂದು ಬೆಂಗಳೂರು ರೈಲ್ವೆ ಪೋಲಿಸರು ಬಂಧಿಸಿದ್ದರು. ಬಂಧಿತ ಆರೋಪಿಯನ್ನ ವಿಚಾರಣೆ ನಡೆಸಿದಾಗ ಸ್ಫೋಟಕ ಮಾಹಿತಿ ಹೊರಬಿದ್ದಿದ್ದು, ಜಾರ್ಖಂಡ್ ಮೂಲದ ಗುಲಾಮ್ ಮುಸ್ತಾಫ್, ನಕಲಿ ಎಎನ್‌ಎಂಎಸ್ ಸಾಫ್ಟ್ ವೇರ್ ಅಭಿವೃದ್ಧಿ ಮಾಡಿಕೊಂಡಿದ್ದಾನೆ ಎಂದು ತಿಳಿದು ಬಂದಿದೆ. ಹಾಗೂ ಕೇಂದ್ರ ಸರ್ಕಾರದ ಐಆರ್ ಸಿಟಿಸಿ ನಲ್ಲಿ ನಕಲಿ ಐಡಿ ಸೃಷ್ಟಿಸಿ ರೈಲ್ವೆ ಇಲಾಖೆಯ ಕೆಲ ಮಾಹಿತಿ ಸಂಗ್ರಹ ಮಾಡಿ ನಕಲಿ ದಾಖಲೆಯುಳ್ಳ ಟಿಕೆಟನ್ನ 2017 ರಿಂದ ಇಲ್ಲಿಯುವರೆಗೂ ಮಾರಾಟ ಮಾಡಿಕೊಂಡು ಬಂದಿದ್ದಾನೆ ಎಂಬ ವಿಚಾರ ತನಿಖೆಯಲ್ಲಿ ಬಯಲಾಗಿದೆ.

ರೈಲ್ವೆ ಪೊಲೀಸರು, ಆರೋಪಿಯು ಬಳಿಯಿಂದ ಲ್ಯಾಪ್ ಟಾಪ್ ಹಾಗೂ ಮೊಬೈಲ್ಗಳನ್ನ ವಶಪಡಿಸಿಕೊಂಡು ಪರಿಶೀಲನೆ ನಡೆಸಿದಾಗ ಮತ್ತಷ್ಟು ಸ್ಫೋಟಕ ಮಾಹಿತಿಗಳು ಬಹಿರಂಗವಾಗಿವೆ. ಈತ ಪಾಕಿಸ್ತಾನ ಮೂಲದ ಡಾರ್ಕ್ ನೆಟ್ ಮುಖಾಂತರ ನಿಷೇಧಿತ ಜಾಲತಾಣದಲ್ಲಿ ಸಕ್ರಿಯನಾಗಿದ್ದಾನೆಂದು ತಿಳಿದು ಬಂದಿದೆ. ಪಾಕಿಸ್ತಾನ ಹಾಗೂ ಬಾಂಗ್ಲಾ ಉಗ್ರರ ಜೊತೆ ನಂಟಿದೆ ಎಂಬ ಮಾಹಿತಿ ತಿಳಿದು ಬಂದಿದೆ. ಹಾಗೂ ಬಾಂಗ್ಲಾದ ಉಗ್ರರ ಜೊತೆ ,ಉತ್ತರ ಕನ್ನಡ ಜಿಲ್ಲೆಯ ಬಟ್ಕಳ ಹಾಗೂ ಒಡಿಶಾದಲ್ಲಿ ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾದವರ ಜೊತೆ ನಂಟು ಹೊಂದಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ.

ಇನ್ನು ಸರ್ಕಾರದ ಕೆಲ ವೆಬ್ ಸೈಟ್ಗಳನ್ನು ಈತನೇ ಹ್ಯಾಕ್ ಮಾಡಿ, ಸೈಬರ್ ಕ್ರೈಮ್ ಕೃತ್ಯಗಳಲ್ಲಿ ಭಾಗಿಯಾಗಿರುವ ಮಾಹಿತಿಯೂ ಲಭ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಪೋಲೀಸರು ತನಿಖೆ ಮುಂದುವರೆಸಿದ್ದಾರೆ.

## ಸಾಲ ಬಾಧೆಗೆ ಮತ್ತೊಂದು ಬಲಿ...?



ಆಲೂರು:ಸಾಲಬಾಧೆಗೆ ಹೆದರಿ ರೈತನೊರ್ವ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಧರ್ಮಪುರಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಕೃಷ್ಣೇಗೌಡರ ಮಗ ನಾಗರಾಜು@ಕುಮಾರ (42) ಎಂಬವರೇ ಮೃತ ದುರ್ದೈವಿ.ತಮ್ಮ ಜಮೀನಿನಲ್ಲಿ ಶುಂಠಿ, ಆಲೂಗಡ್ಡೆ ಸೇರಿದಂತೆ ಇತರ ತರಕಾರಿ ಬೆಳೆ ಗಳನ್ನು ಬೆಳೆಯುವ ಸಲುವಾಗಿ ಶ್ರೀ ಧರ್ಮಸ್ಥಳ ಸಂಘ,ಸ್ವಸಹಾಯ ಸಂಘ ಸ್ತ್ರೀಶಕ್ತಿ ಸಂಘ ಸೇರಿದಂತೆ ಅನೇಕ ಸಂಘ ಸಂಸ್ಥೆಗಳಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಕೈ ಸಾಲ ಮಾಡಿಕೊಂಡಿದ್ದರು ಎಂದು ತಿಳಿದು ಬಂದಿದ್ದು, ತಮ್ಮ ಜಮೀನಿಗೆ ಹಾಕಿದ ಬೆಳೆ ಸರಿಯಾಗಿ ಕೈ ಸೇರದ ಕಾರಣ ಮನನೊಂದು ನಾಲ್ಕು ದಿನಗಳ ಹಿಂದೆ ತಮ್ಮ ಜಮೀನಿನಲ್ಲಿ ವಿಷ ಸೇವಿಸಿದ್ಧರು ಎನ್ನಲಾಗಿದೆ. ಕುಟುಂಬಸ್ಥರು ತಕ್ಷಣ ಆಸ್ಪತ್ರೆಗೆ ದಾಖಲಿಸಿದ್ದರೂ ಚಿಕಿತ್ಸೆ ಫಲಕಾರಿಯಾಗದೇ ನೆನ್ನೆ ಮೃತಪಟ್ಟಿದ್ಧಾರೆ.

ಆಲೂರು ಪೊಲೀಸ್ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.




## ಚಿಕ್ಕಬಳ್ಳಾಪುರ ನಗರಸಭೆ ಸಾರ್ವತ್ರಿಕ ಚುನಾವಣೆಗೆ ಶುಕ್ರವಾರ ಎಂಟು ನಾಮಪತ್ರ ಸಲ್ಲಿಕೆಯಾಗಿದೆ.

ಚಿಕ್ಕಬಳ್ಳಾಪುರ:ಚಿಕ್ಕಬಳ್ಳಾಪುರ ನಗರಸಭೆ ಚುನಾವಣೆ ಜನವರಿ 21 ರಿಂದ ನಾಮ ಪತ್ರ ಸಲ್ಲಿಕೆ ಪ್ರಾರಂಭವಾಗಿದ್ದು, ಶುಕ್ರವಾರ ಚಿಕ್ಕಬಳ್ಳಾಪುರ ನಗರದ 31 ವಾರ್ಡ್ ಗಳ ಪೈಕಿ 30 ನೇ ವಾರ್ಡ್ ನಿಂದ ಬಿ.ಜೆ.ಪಿ ಅಭ್ಯರ್ಥಿಯಾಗಿ ಜಯಲಕ್ಷ್ಮೀ, 14 ನೇ ವಾರ್ಡ್ ಇಂದ ಪಕ್ಷೇತರ ಅಭ್ಯರ್ಥಿಯಾಗಿ ಕೆ.ಜಿ ಕುಮಾರ್, 12 ನೇ ವಾಡ್ನಿರ್ಂದ ಪಕ್ಷೇತರ ಅಭ್ಯರ್ಥಿಯಾಗಿ ಮಹಮ್ಮದ್ ಜಾಫರ್, 13 ನೇ ವಾರ್ಡ್ ನಿಂದ ಬಿ.ಜೆ.ಪಿ ಅಭ್ಯರ್ಥಿಯಾಗಿ ಪದ್ಮಮ್ಮ, 10 ನೇ ವಾಡ್ನಿರ್ಂದ ಪಕ್ಷೇತರ ಅಭ್ಯರ್ಥಿಯಾಗಿ ಸುಬ್ರಮಣ್ಯಚಾರಿ, 2 ನೇ ವಾರ್ಡ್ ನಿಂದ ಬಿಜೆಪಿ ಅಭ್ಯರ್ಥಿಯಾಗಿ ಕೆ. ರೂಪ, 6ನೇ ವಾರ್ಡ್ ನಿಂದ ಬಿ.ಜೆ.ಪಿ ಅಭ್ಯರ್ಥಿಯಾಗಿ ವೀಣಾ ಸಿ, 7 ನೇ ವಾರ್ಡ್ ನಿಂದ ಜೆ.ಡಿ.ಎಸ್ ಅಭ್ಯರ್ಥಿಯಾಗಿ ಮುನಿನರಸಿಂಹಯ್ಯ ಅವರು ನಾಮಪತ್ರ ಸಲ್ಲಿಸಿದ್ದಾರೆ.

ಜನವರಿ 21 ರಿಂದ ಇಲ್ಲಿಯವರೆಗೆ ಒಟ್ಟು 12 ನಾಮ ಪತ್ರಗಳು ಸಲ್ಲಿಕೆಯಾಗಿವೆ. ಚಿಕ್ಕಬಳ್ಳಾಪುರ ನಗರಸಭೆ ಚುನಾವಣೆಗೆ ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಜನವರಿ 28, ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಜನವರಿ 29, ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಜನವರಿ 31, ಮತದಾನ ಅವಶ್ಯವಿದ್ದರೆ, ಮತದಾನವನ್ನು ನಡೆಸಬೇಕಾದ ದಿನಾಂಕ ಫೆಬ್ರವರಿ 09, (ಸಮಯ ಬೆಳಿಗ್ಗೆ 7.00 ಗಂಟೆಯಿಂದಸಾಯಂಕಾಲ 5.00 ಗಂಟೆವರೆಗೆ) ಮರುಮತದಾನ ಇದ್ದಲ್ಲಿ ಮತದಾನ ನಡೆಸಬೇಕಾದ ದಿನಾಂಕ ಫೆಬ್ರವರಿ 10, (ಸಮಯ ಬೆಳಿಗ್ಗೆ 7.00 ಗಂಟೆಯಿಂದ ಸಾಯಂಕಾಲ 5.00ಗಂ ಟೆವರೆಗೆ) ಮತಗಳ ಎಣಿಕೆಯ ದಿನಾಂಕ ಫೆಬ್ರವರಿ 11, (ಸಮಯ ಬೆಳಿಗ್ಗೆ 8.00ಗಂ ಟೆಯಿಂದ ತಾಲ್ಲೂಕಿನ ಕೇಂದ್ರಸ್ಥಳದಲ್ಲಿ) ನಾಮ ಪತ್ರ ಸಲ್ಲಿಸುವ ಉಮೇದುದಾರರು ಸಂಬಂಧಪಟ್ಟ ಚುನಾವಣಾಧಿಕಾರಿಗಳಿಗೆ ಸಲ್ಲಿಸಬಹುದಾಗಿರುತ್ತದೆ.

ಒಂದನೇ ಪುಟದಿಂದ

## ಮಹಾತ್ಮಾ ಗಾಂಧಿಯವರ 150 ನೇ ಜನ್ಮ ದಿನದೊಂದಿಗೆ 71 ನೇ ಗಣರಾಜ್ಯೋತ್ಸವ ಆಚರಣೆ : ಎಸ್.ಆರ್.ವಿಶ್ವನಾಥ್

ಈ ಬಾರಿಯ ಗಣರಾಜ್ಯೋತ್ಸವದಲ್ಲಿ ವಿವಿಧ ಇಲಾಖೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿವವರನ್ನು ಗುರುತಿಸಿ ಅವರಿಗೆ "ಸೇವಾರತ್ನ" ಪ್ರಶಸ್ತಿಯನ್ನು ನೀಡಲಾಗುವುದೆಂದ ಶಾಸಕರು ಅಧಿಕಾರಿಗಳನ್ನು ಗುರುತಿಸುವ ಜವಾಬ್ದಾರಿಯನ್ನು ಆಯಾ ಇಲಾಖೆ ಅಧಿಕಾರಿಗಳಿಗೆ ನೀಡಲಾಗಿದೆ ಎಂದು ತಿಳಿಸಿದರು .

ಪತ್ರಿಕಾಗೋಷ್ಠಿಯಲ್ಲಿ ತಾಲ್ಲೂಕು ದಂಡಾಧಿಕಾರಿಗಳಾದ ಎನ್. ರಘುಮೂರ್ತಿ ಸಹಾಯಕ ಪೊಲೀಸ್ ಆಯುಕ್ತ ಶ್ರೀನಿವಾಸ್ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಮಲಾಕರ್ ಮೊದಲಾದವರು ಶಾಸಕರೊಂದಿಗೆ ಪಾಲ್ಗೊಂಡಿದ್ದರು.

## 'ಕೈಗಾರಿಕೆಗಳು ತಮ್ಮ ಉತ್ಪನ್ನಗಳನ್ನು ಅಧಿಕಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತವೆ : ಪ್ರೊ. ಎನ್.ಆರ್. ಶೆಟ್ಟಿ

'ವಿವಿಧ ಹಿನ್ನಲೆಗಳಿಂದ ಬಂದಿರುವ ಪ್ರತಿಭಾವಂತ ತಂತ್ರಜ್ಞರು ಒಂದೆಡೆ ಸೇರಿ ತಮ್ಮ ತಮ್ಮ ತಂಡಗಳ ಸಹೋದ್ಯೋಗಿಗಳೊಡನೆ ವಿಚಾರ ವಿನಿಮಯ ನಡೆಸಿ ಅತ್ಯಂತ ಅಲ್ಪಾವಧಿಯಲ್ಲಿ ಸಮಸ್ಯೆಗೆ ಅಥವ ಅಗತ್ಯಗಳಿಗೆ ಪರಿಹಾರ ಒದಗಿಸುವ ಹ್ಯಾಕಥಾನ್ ತೆರೆನ ಸ್ಪರ್ಧಾಮೇಳಗಳು ಎಲ್ಲೆಡೆ ನಡೆಯಬೇಕು. ಏಕೆಂದರೆ ನಮ್ಮ ದೇಶದ ಜ್ವಲಂತ ಸಮಸ್ಯೆಗಳಿಗೆ ನಮ್ಮ ತಂತ್ರಜ್ಞಾನದ ಪಟುಗಳು ಸುಲಭ ರೀತಿಯ ಪರಿಹಾರಗಳನ್ನು ಒದಗಿಸಿದರೆ ನಮ್ಮೆಲ್ಲರ ಬದುಕು ಹಸನಾಗುತ್ತದೆ, ದೇಶ ಪ್ರಗತಿಯತ್ತ ಸಾಗುತ್ತದೆ. ಕ್ರಮೇಣ ಇಡೀ ಜಗತ್ತಿನ ಸಮಸ್ಯೆಗಳಿಗೆ ನಮ್ಮ ಭಾರತದ ತಂತ್ರಜ್ಞರು ಪರಿಹಾರ ನೀಡುವತ್ತ ಗಮನಹರಿಸಬೇಕು, ಆಗ ನಾವು ವಿಶ್ವದ ತಂತ್ರಜ್ಞಾನ ಭೂಪಟದಲ್ಲಿ ಮೊದಲಿಗರಾಗಿ ವಿರಾಜಮಾನರಾಗುತ್ತೇವೆ', ಎಂದರು.

ದೇಶದಾದ್ಯಂತ ಸಾವಿರಕ್ಕೂ ಮಿಗಿಲಾಗಿ ಯುವ ಸಂಶೋಧಕರು ಹಾಗೂ ತಂತ್ರಜ್ಞರು ಈ ಮಹಾಮೇಳದಲ್ಲಿ ಪಾಲ್ಗೊಳ್ಳಲು ಅರ್ಜಿ ಸಲ್ಲಿಸಿದ್ದರು. ಅನೇಕ ಮಜಲುಗಳಲ್ಲಿ ಶಿಸ್ತುಬದ್ಧ ಪರಿಶೀಲನೆಗಳಿಗೆ ಒಳಗಾದ ನಂತರ ಅಂತಿಮವಾಗಿ 40 ತಂಡಗಳನ್ನು ಆಯ್ಕೆ ಮಾಡಲಾಗಿದೆ. ಹೈದರಾಬಾದ್, ಚೆನ್ನೈ, ಪುದುಚೇರಿ, ತುಮಕೂರು ಹಾಗೂ ಬೆಂಗಳೂರಿನ ತಂತ್ರಜ್ಞರ ತಂಡಗಳು ಎರಡು ದಿನಗಳ ತನಕ ನಡೆಯುವ ಈ ಬೌದ್ಧಿಕ ಕ್ರೀಡೆಗಳಲ್ಲಿ ಪಾಲ್ಗೊಳ್ಳಲಿವೆ. ಅನೇಕ ಪ್ರತಿಷ್ಠಿತ ಕೈಗಾರಿಕೆ ಹಾಗೂ ಔದ್ಯಮಿಕ ಸಂಸ್ಥೆಗಳು ಉತ್ಪಾದನಾ ಪ್ರಕ್ರಿಯೆಯಲ್ಲಿ ಎದುರಾದ ಪ್ರಾಯೋಗಿಕ ಸಮಸ್ಯೆಗಳನ್ನು ಈ ತಂಡಗಳಿಗೆ ನೀಡಿ ರಚನಾತ್ಮಕ ಪರಿಹಾರ ಪಡೆಯಲು ಸವಾಲುಗಳನ್ನು ಒಡ್ಡಲಿವೆ. ಈ ಸವಾಲುಗಳನ್ನು ಯಶಸ್ವಿಯಾಗಿ ಪರಿಹರಿಸುವ ತಂಡಗಳಿಗೆ ಆಕರ್ಷಕ ಬಹುಮಾನಗಳು ಲಭಿಸಲಿವೆ.

ಪಿನಾಕಲ್ ಟೆಕ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ॥ ಮನೋಜ್ ಕುಮಾರ್ ಹಾಗೂ ಫ್ಯಾಕ್ಟೋರಿಯಲ್ ಸಂಸ್ಥೆಯ ಆದಿತ್ಯ ದ್ರುವ ಗೌರವಾನ್ವಿತ ಅತಿಥಿಗಳಾಗಿದ್ದರು. ಪ್ರಾರಂಭದಲ್ಲಿ ನಿಟ್ಟೆ ಮೀನಾಕ್ಷಿ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ॥ ಹೆಚ್.ಸಿ. ನಾಗರಾಜ್ ಹ್ಯಾಕಥಾನ್ ಸ್ಪರ್ಧೆಯ ಬಗ್ಗೆ ವಿವರಿಸಿದರು. ಸಮಾರಂಭದಲ್ಲಿ ನಿಟ್ಟೆ ಎಜುಕೇಶನ್ ಟ್ರಸ್ಟ್‌ನ ಆಡಳಿತಾಧಿಕಾರಿ ರೋಹಿತ್ ಪೂಂಜ, ರಕ್ಷಣಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎಲ್.ಎಂ. ಪಟ್ನಾಯಕ್, ನಿಟ್ಟೆ ಶೈಕ್ಷಣಿಕ ವಿಭಾಗದ ಮುಖ್ಯಸ್ಥ ಪ್ರೊ. ವಿ. ಶ್ರೀಧರ್ ಹಾಗೂ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಪ್ರೊ. ಎಂ.ಎನ್. ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

## ಕಳ್ಳತನ ಮಾಡಿ ಪರಾರಿಯಾಗುತ್ತಿದ್ದ ಕಳ್ಳನನ್ನು ಬೆನ್ನಟ್ಟಿ ಹಿಡಿದ ಆಲೂರು ಪೋಲೀಸರು



ಆಲೂರು : ಸಕಲೇಶಪುರದ ಸುತ್ತಮುತ್ತ ಹಳ್ಳಿಗಳ್ಳಲ್ಲಿ ಕಳ್ಳತನ ಮಾಡಿದ ಚಿನ್ನವನ್ನು ಸಾಗಿಸುವ ದಾರಿಯಲ್ಲಿ ಪೋಲೀಸರನ್ನು ಕಂಡು ಪರಾರಿಯಾಗಲೆತ್ನಿಸಿದ ಕಳ್ಳನೋರ್ವನನ್ನು ಪೋಲೀಸರು ಬೆನ್ನಟ್ಟಿ ಬಂಧಿಸಿರುವ ಘಟನೆ ಆಲೂರಿನಲ್ಲಿ ನಡೆದಿದೆ.

ಅನೇಕಬಾರಿ ಪೋಲೀಸರ ಅತಿಥಿಯಾಗಿದ್ದು ಶಿಕ್ಷೆ ಅನುಭವಿಸಿ ಹೊರಬಂದು ಪುನಃ ಕಳ್ಳತನ ಮಾಡುತ್ತಾ ಪೋಲೀಸರ ಕಣ್ತಪ್ಪಿಸಿ ಓಡಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ರಾಷ್ಟ್ರೀಯ ಹೆದ್ದಾರಿ 75ರ ಮಾವನೂರು ಗ್ರಾಮದ ಬಳಿ ಆಲೂರು ಪೊಲೀಸ್ ಠಾಣೆಯ ಪೊಲೀಸರು ಬಂಧಿಸಿದರು.

ಬಂಧಿತ ಆರೋಪಿಯೂ ಆಲೂರು ತಾಲೂಕಿನ ಮುದಿಗೆರೆ ಗ್ರಾಮದ ರಂಗೇಗೌಡರ ಮಗ ಸಂತೋಷ್ ಎಂ. ವಿ (33) ಎಂದು ಪತ್ತೆ ಮಾಡಲಾಗಿದ್ದು ಈತನ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡು ಬಂಧಿಸಿ ನ್ಯಾಯಾಲಯಕ್ಕೆ ಒಳಪಡಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧಿಕ್ಷರು ಡಿ.ಎಸ್ ನಂದಿನಿ, ಸಕಲೇಶಪುರ ಉಪ ವಿಭಾಗದ ಅಧಿಕಾರಿ ಗೋಪಿ, ಆಲೂರು ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ರೇವಣ್ಣ, ಎ.ಎಸ್.ಐ ರಮೇಶ್, ಸಿಬ್ಬಂದಿಗಳಾದ ಮೋಹನ್ ಕುಮಾರ್, ಕೃಷ್ಣಶೆಟ್ಟಿ, ಮಧು, ರವಿ, ಕೌಶಿಕ್, ಮಧು, ಹರೀಶ್ ಹಾಜರಿದ್ದರು

## 71 ನೇ ಗಣರಾಜ್ಯೋತ್ಸವ ದಿನಾಚರಣೆ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಜಿಲ್ಲಾಡಳಿತ ವತಿಯಿಂದ 71ನೇ ಗಣರಾಜ್ಯೋತ್ಸವವನ್ನು ಜನವರಿ 26 ರಂದು ಬೆಳಿಗ್ಗೆ 9:00 ಗಂಟೆಗೆ ಚಿಕ್ಕಬಳ್ಳಾಪುರನಗರದ ಸರ್. ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಧ್ವಜಾರೋಹಣವನ್ನು ಜಿಲ್ಲಾಧಿಕಾರಿಗಳು ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಆರ್.ಲತಾ ರವರು ನೆರವೇರಿಸಲಿದ್ದಾರೆ.

ಕಾರ್ಯಕ್ರಮದ ಘನ ಉಪಸ್ಥಿತಿಯನ್ನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ, ವೈದ್ಯಕೀಯ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ॥ ಸಿ.ಎನ್. ಅಶ್ವತ್ಥನಾರಾಯಣ ರವರು ವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಶಾಸಕಾರಾದ ಡಾ॥ ಕೆ.ಸುಧಾಕರ್ ರವರು ವಹಿಸಲಿದ್ದಾರೆ.

ಮುಖ್ಯ ಅಥಿತಿಗಳಾಗಿ ಮಾನ್ಯ ವಿಧಾನಸಭೆ ಉಪಸಭಾಧ್ಯಕ್ಷರು ಹಾಗೂ ಚಿಂತಾಮಣಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಂ.ಕೃಷ್ಣಾರೆಡ್ಡಿ, ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಎಂ.ಬಿ.ಚಿಕ್ಕನರಸಿಂಹಯ್ಯ, ಚಿಕ್ಕಬಳ್ಳಾಪುರ ಲೋಕಸಭಾ ಸಂಸದರಾದ ಬಿ.ಎನ್. ಬಚ್ಚೇಗೌಡ, ಕೋಲಾರ ಲೋಕಸಭಾ ಕ್ಷೇತ್ರದ ಸಂಸದರಾದ ಮುನಿಸ್ವಾಮಿ, ಶಾಸಕರುಗಳಾದ ಎನ್.ಎಚ್.ಶಿವಶೆಂಕರರೆಡ್ಡಿ, ವಿ.ಮುನಿಯಪ್ಪ, ಎಸ್.ಎನ್. ಸುಬ್ಬಾರೆಡ್ಡಿ, ವಿಧಾನ ಪರಿಷತ್ ಶಾಸಕರುಗಳಾದ ವೈ.ಎ.ನಾರಾಯಣಸ್ವಾಮಿ, ಆರ್. ಚೌಡರೆಡ್ಡಿ ತೂಪಲ್ಲಿ, ಸಿ.ಆರ್.ಮನೋಹರ್ ಮತ್ತು ತಾಲ್ಲೂಕು ಪಂಚಾಯತ್ ಅಧ್ಯಕ್ಷರಾದ ರಾಮಸ್ವಾಮಿ ರವರು ಭಾಗವಹಿಸುವರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಅಂದು ಸಂಜೆ 4:00 ಗಂಟೆಗೆ ಡಾ.ಬಿಆರ್.ಅಂಬೇಡ್ಕರ್ ಭವನದಲ್ಲಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

# ಸರ್ವರ್ ಪ್ರಾಬ್ಲಂಗೆ ಸಾರ್ವಜನಿಕರು ಹೈರಾಣು

ಬಾಗಲಕೋಟ: ಜಿಲ್ಲೆಯ ರಬಕವಿ,ಬನಹಟ್ಟಿ ತಾಲೂಕಿನಲ್ಲಿ ನ್ಯಾಯಬೆಲೆ ಅಂಗಡಿ ಪಡಿತರ ವಿತರಕರು ಮತ್ತು ಸಾರ್ವಜನಿಕರಿಂದ ತಹಶೀಲ್ದಾರ್ ಎಸ್ ಬಿ. ಕಾಂಬಳೆ ಅವರಿಗೆ ಮನವಿ ಸಲ್ಲಿಸಿದರು.



ಇತ್ತೀಚೆಗೆ ಸರ್ವರ್ ಇಲ್ಲದರ ಪರಿಣಾಮ ಕೂಲಿಕಾರರು ಪಡಿತರವೂ ಇಲ್ಲ... ಮತ್ತೊಂದೆಡೆ ಕೂಲಿಯೂ ಸಿಗದೇ ಒದ್ದಾಡುವಂತಾಗಿದೆ. ಬೆಳಗ್ಗೆಯಿಂದ ಕಂಪ್ಯೂಟರ್ ಎದುರು ಕುಳಿತರೂ "ದಿಸ್ ಸೈಟ್ ಕಾಂಟ್ ಬೀ ರೀಚ್' ಎಂದು ಪರದೆ ಮೇಲೆ ಕಾಣಿಸಿಕೊಳ್ಳುವ ಮೆಸೆಜ್ ಓದಿ ಓದಿ ಸುಸ್ತಾಗಿದೆ ಎನ್ನುತ್ತಾರೆ ಪಡಿತರ ವಿತರಕರು.

ಇದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಸರ್ವರ್ ಅವಾಂತರದ ವಾಸ್ತವದ ಸ್ಥಿತಿ. ಕಳೆದ 30 ದಿನಗಳಿಂದ ಸರ್ವರ್ ನರ್ವಸ್ ಆಗಿದ್ದು, ಪಡಿತರ ಫಲಾನುಭವಿಗಳು ಪಡಿತರ ಅಂಗಡಿಗಳ ಮುಂದೆ ನಿಂತು ನಿಂತು ಸೋತಿದ್ದು, 'ನಾಳೆ ಬಾ' ಎನ್ನುವ ಸ್ಥಿತಿ ನಿರ್ಮಾಣವಾಗಿದೆ.

ಪಡಿತರ ಪಡೆಯಲು ಕುಟುಂಬದ ಎಲ್ಲಸದಸ್ಯರ ಬೆರಳಚ್ಚು ಪಡೆಯುವುದರ ಸಲುವಾಗಿ (ಕೆವೈಸಿ) ಪ್ರತ್ಯೇಕ ಸರ್ವರ್ ಲೈನ್ ವ್ಯವಸ್ಥೆ ಕಲ್ಪಿಸುವುದಾಗಿ ಹೇಳಿದ್ದ ಇಲಾಖೆ ಅದರಿಂದ ಯಾವುದೇ ಬೆಳವಣಿಗೆಗಳು ಕಾಣದೇ ಹಳೆಯ ಸರ್ವರ್ ಕೂಡ ಡೌನ್ ಎಂದು ಕಾಣಿಸಿಕೊಂಡು ವಿತರಣೆ ವ್ಯವಸ್ಥೆಗೆ ಲಕ್ವಾ ಹೊಡೆದಂತಾಗಿದೆ. ಇದುವರೆಗೆ ಶೇ 70–75 ರಷ್ಟು ಆಹಾರ ಧಾನ್ಯ ವಿತರಣೆಯಾಗಬೇಕಾಗಿತ್ತು. ಆದರೆ, 15–20 ರಷ್ಟು ಮಾತ್ರ ವಿತರಣೆಯಾಗಿರುವುದು ಇಲಾಖೆಯ ವೆಬ್ಸೈಟಿನ ಅಂಕಿ,ಸಂಖ್ಯೆಗಳು ತಿಳಿಸುತ್ತವೆ.

ತಾಲ್ಲೂಕಿನ ಬಹುತೇಕ ನ್ಯಾಯಬೆಲೆ ಅಂಗಡಿಗಳಲ್ಲಿ ಈ ರೀತಿಯ ಸಮಸ್ಯೆ ಇದ್ದರೂ ಕೂಡ ಸರ್ಕಾರ ಯಾವುದೇ ಕ್ರಮಕ್ಕೆ ಮುಂದಾಗುತ್ತಿಲ್ಲ ಎಂದು ಸಾರ್ವಜನಿಕರು ತಮ್ಮ ಆಕ್ರೋಶ ಹೊರ ಹಾಕುತಿದ್ದಾರೆ.

ಇನ್ನು ಮುಂದಾದರೂ ಆಹಾರ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಂಡು ಸರ್ವರನ್ನು ನೀಡಿ. ಇಲ್ಲವಾದರೆ ಇದಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕೆಂದು ಸಾರ್ವಜನಿಕರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ಗಜಾನನ ನಾಗರಾಳ. ಬಾಳಪ್ಪ ಸಿದ್ದಪ್ಪಗೋಳ. ಶೇಕರ ಸಜ್ಜನವರ. ಹನುಮಂತ ಕುಂದಗೋಳ. ಗುರು ಗೀರಸಗಾರ.

ಆರೀಫ ಕೊನ್ನೂರ. ಪ್ರಕಾಶ ತೇರಣಿ ಸೇರಿದಂತೆ ಮುಂತಾದವರು ಪಾಲ್ಗೊಂಡಿದ್ದರು.

# ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ



ಬಾಗೇಪಲ್ಲಿ:ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ವತಿಯಿಂದ ರಾಷ್ಟ್ರೀಯ ಮಕ್ಕಳ ದಿನಾಚರಣೆ ಆಚರಿಸಲಾಗುತ್ತಿದೆ .

ರಾಷ್ಟ್ರದಾದ್ಯಂತ ಹೆಣ್ಣು ಮಕ್ಕಳ ಬ್ರೂಣ ಹತ್ಯೆ, ಕೌಟುಂಬಿಕ ದೌರ್ಜನ್ಯ, ಮಹಿಳೆ ಮತ್ತು ಹೆಣ್ಣು ಮಕ್ಕಳ ನ್ಯೂನತೆ, ಪೋಷಣೆ, ಶಿಕ್ಷಣ ಮುಂತಾದ ಸಮಸ್ಯೆಗಳ ಬಗ್ಗೆ ಅರಿವನ್ನು ನೀಡಲಾಗುತ್ತಿದೆ.

ಕಾರ್ಯಕ್ರಮದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಜಿ.ಸುಧಾಕರ್ ಮಾತನಾಡುತ್ತಾ ಜನವರಿ 24 ರಂದು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಆಚರಿಸುತ್ತೇವೆ?ನನ್ನ ಪ್ರಕಾರ ಪ್ರತಿಯೊಂದು ಹೆಣ್ಣುಮಗಳೂ ಸಹಾ ಸಾಧಕಿಯರೇ ಕಾರಣ ಪುರುಷ ಪ್ರಧಾನ ಸಮಾಜದಲ್ಲಿ ಎಲ್ಲ ಸವಾಲು ಗಳನ್ನೂ ಮೆಟ್ಟಿನಿಂತು ಪ್ರತಿಯೊಂದು ಕ್ಷೇತ್ರದಲ್ಲೂ ಸಾಧನೆಯನ್ನು ಮಾಡುತ್ತಿದ್ದಾರೆ.

ಒಂದು ಹೆಣ್ಣು ತನಗೆ ತಾನು ಆತ್ಮವಿಶ್ವಾಸ ಹಾಗೂ ಆತ್ಮಸ್ಥೈರ್ಯವನ್ನು ಬೆಳೆಸಿಕೊಂಡು ಇತರೆ ಹೆಣ್ಣುಮಕ್ಕಳಿಗೂ ಮಾದರಿಯಾಗ ಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಬಾಗೇಪಲ್ಲಿ ತಾಲ್ಲೂಕು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಮಹಿಳಾ ಪದಾಧಿಕಾರಿಗಳು ವಕೀಲರು ಎಜಿ.ಸುಧಾಕರ್ ಇನ್ನೂ ಮುಂತಾದ ಪ್ರಮುಖರು ಭಾಗವಹಿಸಿದ್ದರು.

# ಶ್ರದ್ಧಾ ಕೇಂದ್ರಗಳಿಗೆ ಕಸದ ಬುಟ್ಟಿ ವಿತರಣೆ

ಶಿಡ್ಲಘಟ್ಟ: ಭಾರತದಲ್ಲಿ ಸ್ವಚ್ಚತೆ ಅನ್ನುವುದು ಯಾವ ಬಡವರು, ಶ್ರೀಮಂತರು ಎನ್ನುವ ಬೇಧ ಭಾವವಿಲ್ಲದೆ ಸ್ವಚ್ಚತೆ ಬಗ್ಗೆ ನಾವು ಕೊಡುವಂತಹ ಪ್ರಾಮುಖ್ಯತೆ ಅತ್ಯಂತ ಕನಿಷ್ಠ ಎಂದು ತಹಶೀಲ್ದಾರ್ ಎಂ ದಯಾನಂದ್ ತಿಳಿಸಿದರು.

ನಗರದ ಕಾಳಿಕಾಂಭ ದೇವಸ್ಥಾನದ ಸಭಾಂಗಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಜಿಲ್ಲಾ ನಿರ್ದೇಶಕರಾದಂತ ಬಿ ವಸಂತ್ ತಾಲ್ಲೂಕಿನ ಪ್ರಗತಿ ಬಂಧು ಸ್ವ ಸಹಾಯ ಸಂಘಗಳ ಸದಸ್ಯರಿಗೆ ಹಾಗೂ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಾಂದಹ ನಗರದ ಶ್ರೀಮತಿ ಪದ್ಮಾ ಹಾಗೂ ಸಾಕೀಬ್ ಪಾಷ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿರುವ ಇವರಿಗೆ ಚಿಕಿತ್ಸೆಗಾಗಿ 17000 ಸಾವಿರ ರೂಪಾಯಿಗಳ ಚೆಕ್ ಅನ್ನು ನೀಡುವ ಮೂಲಕ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾ ಡಿದರು.



ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ॥ಡಿ. ವೀರೇಂದ್ರ ಹೆಗ್ಗಡೆಯವರು ಜನರು ಸ್ವಾವಲಂಬಿ ಜೀವನ ನಡೆಸಲು ನೆರವಾಗುತ್ತಿರುವುದು ಶ್ಲಾಘನೀಯವಾದದ್ದು ಎಂದು ತಿಳಿಸಿದರು.

ಯಾವುದೇ ಜಾತಿ ಬೇದ ಭಾವವಿಲ್ಲದೆ ಎಲ್ಲಾ ಶ್ರದ್ಧಾ ಕೇಂದ್ರಗಳಾದ ದೇವಸ್ಥಾನ, ಮಸೀದಿ, ಚರ್ಚ್ ಗಳಿಗೆ ಹಸಿಕಸ ಹಾಗೂ ಒಣಕಸದ ಬುಟ್ಟಿಗಳನ್ನು ತಾಲ್ಲೂಕಿನ 62 ಕೇಂದ್ರಗಳಿಗೆ ವಿತರಣೆ ಮಾಡಿದರು.

ನಮ್ಮ ಯೋಜನೆಯಲ್ಲಿ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಿ ಸ್ವಾವಲಂಬಿ ಉದ್ಯೋಗ ಕಂಡುಕೊಂಡು ಉತ್ತಮ ಜೀವನ ನಡೆಸುವುದಕ್ಕೆ ಸಹಕಾರಿ ಯಾಗುತ್ತಿರುವುದು ಬಹಳ ಸಂತೋಷದ ವಿಚಾರ ತಾಲ್ಲೂಕಿನ ಅನೇಕ ಕಡೆಯಲ್ಲಿ ಹಲವಾರು ಸಮಸ್ಯೆಗಳಿಗೆ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಸೂಕ್ತ ಪರಿಹಾರ ಒದಗಿಸಲಾಗುತ್ತಿದೆ, ರಾಜ್ಯಾದ್ಯಂತ ಬಡ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳಿಗೆ 1000 ರೂಗಳಂತೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ ಹಾಗೆಯೇ ನಿರ್ಗತಿಕರಿಗೆ ಹಾಗೂ ಅಂಗವಿಕಲರಿಗೆ ವಯೋವೃದ್ಧರಿಗೆ ತಿಂಗಳಿಗೆ 750 ರೂಗಳಂತೆ ಮಾಶಾಸನ ನೀಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಮಯದಲ್ಲಿ ತಾಲ್ಲೂಕು ಯೋಜನಾಧಿಕಾರಿ ಪ್ರಕಾಶ್ ಕುಮಾರ್, ಶಿಡ್ಲಘಟ್ಟದ ಎ ವಲಯದ ಮೇಲ್ವಿಚಾರಕರಾದ ಚೇತನ್, ಶಿಡ್ಲಘಟ್ಟದ ಬಿ ವಲಯದ ಮೇಲ್ವಿಚಾರಕರಾದ ಶ್ರೀಮತಿ ಜ್ಯೋತಿ, ಸಾದಲಿ ಮೇಲ್ವಿಚಾರಕರಾದ ದಿನೇಶ್, ನಾನವಿಕಾಸದ ಮೇಲ್ವಿಚಾರ ಕರ ನಾನವಿಕಾಸದ ಮೇಲ್ವಿಚಾರಕರಾದ ಶ್ರಿಮತಿ ಲಕ್ಷ್ಮೀ, ಬಶೆಟ್ಟಿಹಳ್ಳಿ ಮೇಲ್ವಿ ಚಾರಕರಾದ ಆಶಾ, ಆಂತರಿಕ ಲೆಕ್ಕ ಪರಿಶೋದಕ ಗೋಪಿನಾಥ್,ದಿಬ್ಬೂರಹಳ್ಳಿ ಒಕ್ಕೂಟ ಅಧ್ಯಕ್ಷ ಶ್ರೀನಿವಾಸ್ ವಿ, ಗ್ರಾಮಾಭಿವೃದ್ಧಿ ಯೋಜನೆಯ ಎಲ್ಲಾ ಒಕ್ಕೂಟದ ಪದಾದಿಕಾರಿಗಳು ಹಾಜರಿದ್ದರು.

ವರದಿ : ಅರುಣ್ ಸಿಂಗ್ ಎನ್

# ಮಂಚೇನಹಳ್ಳಿಯಲ್ಲಿ ಗುಲಾಬಿ ಆಂದೋಲನ



ಮಂಚೇನಹಳ್ಳಿ: ತಂಬಾಕು ಉತ್ಪನ್ನಗಳನ್ನು ಸೇವಿಸುವುದರಿಂದ ಜನಸಾಮಾನ್ಯರಿಗೆ ಹಲವಾರು ರೀತಿಯ ಗಂಭೀರ ಕಾಯಿಲೆಗಳಾದ ಕ್ಯಾನ್ಸರ್ ಹೃದ್ರೋಗ ಅಸ್ತಮಾ ಮುಂತಾದ ರೋಗಗಳು ಬರುತ್ತವೆ ಎಂಬುದರ ಬಗ್ಗೆ ಅರಿವು ಮೂಡಿಸಲಾಯಿತು.

ಕಳೆದ ಎರೆಡು ದಿನಗಳ ಹಿಂದೆ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕಬಳ್ಳಾಪುರ ರವರ ಸೂಚನೆಯಂತೆ ಚಿಕ್ಕಬಳ್ಳಾಪುರ ಜಿಲ್ಲಾದ್ಯಂತ ಏಕಕಾಲದಲ್ಲಿ ಆರಂಭವಾಗಿರುವ ತಂಬಾಕು ನಿಯಂತ್ರಣ ಕುರಿ ತಂತೆ ಗುಲಾಬಿ ಆಂದೋಲನ ಕಾರ್ಯ ಕ್ರಮವನ್ನು ನೆನ್ನೆ ಬೆಳಗ್ಗೆ ಮಂಚೇನಹಳ್ಳಿ ಸರ್ಕಾರಿ ಪ್ರೌಢಶಾಲೆ ಹಾಗೂ ಸಂಯುಕ್ತ ಪಧವಿ ಪ್ರೌಢಶಾಲೆ ವಿಧ್ಯಾರ್ಥಿಗಳು ಪ್ರತ್ಯಕವಾಗಿ ಮಂಚೇನಹಳ್ಳಿಯಲ್ಲಿ ಅರಿವು ಮೂಡಿಸಿದರು. ವಿಧ್ಯಾರ್ಥಿಗಳೊಂದಿಗೆ, ಶಿಕ್ಷಕರು ಸಹ ಜೊತೆಗೂಡಿ ಶಾಲಾ ವ್ಯಾಪ್ತಿಯಲ್ಲಿ ಬರುವ ತಂಬಾಕು ಉತ್ಪನ್ನ ಗಳನ್ನು ಮಾರಾಟ ಮಾಡುತ್ತಿರುವ ಅಂಗಡಿ ಮಾಲೀಕರು ಹಾಗೂ ಇದೇ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನಗಳನ್ನು ಬಳಕೆ ಮಾಡುತ್ತಿರುವ ಸಾರ್ವಜನಿಕರಿಗೆ ಗುಲಾಬಿ ಹೂಗಳನ್ನು ನೀಡುವುದರ ಮೂಲಕ ಜಾಗೃತಿ ಮೂಡಿಸಡಿದರು.

ಈ ಕಾರ್ಯ ಕ್ರಮಕ್ಕೆ ಮಂಚೇ ನಹಳ್ಳಿ ಕ್ಷೇತ್ರದ ಜಿಲ್ಲಾ ಪಂಚಾಯಿತಿ ಸದಸ್ಯರಾದ ಪ್ರಕಾಶ್ ರೆಡ್ಡಿ, ಕ್ಲಸ್ಟರ್ ಸಿಆರ್‌ಪಿ ಸೀತಾರಾಮ, ಸಂಯುಕ್ತ ಪಧವಿ ಪ್ರೌಢಶಾಲೆ ಮುಖ್ಯ ಶಿಕ್ಷಕರಾದ ರಾಮಚಂದ್ರ ರೆಡ್ಡಿ , ಶಿಕ್ಷಕರುಗಳಾದ ಹೆಚ್.ಎಂ.ಬಾಸ್ಕರ್, ಕೆ.ವಿ.ಪದ್ಮನಾಭ, ಕೆ.ವಿ.ನರಸಿಂಹಮೂರ್ತಿ, ದರ್ಶನ್.ಆರ್, ಅಮರೇಶ್ ಸಿ.ಕೆ ಹಾಗೂ ಸಾರ್ವಜನಿಕರು ಭಾಗವಹಿಸಿದ್ದು ವಿಶೇಷವಾಗಿದ್ದು ಈ ಬಗ್ಗೆ ಮಕ್ಕಳು ಶಾಲಾ ವಿದ್ಯಾರ್ಥಿಗಳು ಶಿಕ್ಷಕರೊಂ ದಿಗೆ ಪ್ರತಿ ಅಂಗಡಿಗಳಲ್ಲಿ ಭೇಟಿ ನೀಡಿ ವರ್ತಕರಿಗರ ಹಾಗೂ ಮಂಚೇನಹಳ್ಳಿ ಪ್ರಮುಖ ಬೀದಿಗಳಲ್ಲಿ ಸರ್ವಜನಿಕರಿಗೆ ಅರಿವು ಮುಡಿಸಿದರು.

# ಗಣರಾಜ್ಯೋತ್ಸವ ಆಚರಣೆ ಸಿದ್ಧತೆ



ಗೌರಿಬಿದನೂರು : ಅದ್ದೂರಿ ಗಣರಾಜ್ಯೋತ್ಸವಕ್ಕೆ ಜೈ ಮಾತಾ ಸೇವಾ ಟ್ರಸ್ಟ್ ಸಕಲ ಸಿದ್ದತೆ ಮಾಡಿಕೊಂಡಿದೆ. 2006 ರಲ್ಲಿ ಆರ್ ಎಸ್ ಎಸ್ ಪ್ರಮುಖರಾದ ಕಲಡ್ಕ ಪ್ರಭಾಕರ ಭಟ್ ರವರ ಪ್ರೇರಣೆ ಯಿಂದ ಎಚ್ ನಾಗಸಂದ್ರದಲ್ಲಿ ಭಾರತ ಮಾತೆಯ ದೇವಾಲಯಯನ್ನು ನಿರ್ಮಿಸಿ ಅಂದಿನಿಂದ ಆಗಸ್ಟ್ 15ರ ಮಧ್ಯರಾತ್ರಿ ಸ್ವಾತಂತ್ರೋತ್ಸವವನ್ನು ಆಚರಿಸಿಕೊಂಡು ಬರುತ್ತಿದ್ದು, ಕಳೆದ ಎರಡು ವರ್ಷಗಳಿಂದ ಜನವರಿ 26 ರಂದು ಗಣರಾಜೋತ್ಸವವನ್ನು ಅಚರಿಸುತ್ತಿದ್ದೇವೆ ಎಂದು ಭಾರತ ಮಾತಾ ಸೇವಾ ಟ್ರಸ್ಟನ ಅಧ್ಯಕ್ಷ ಎನ್ ಎಂ ರವಿನಾರಾಯಣರೆಡ್ಡಿ ತಿಳಿಸಿದರು. ಪ್ರತಿ ವರ್ಷದಂತೆ

ಈ ವರ್ಷವೂ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಿದ್ದು 26 ಜನವರಿ 2020 ರಂದು ಬೆಳಗ್ಗೆ 8:30 ಕ್ಕೆ ಭಾರತ ಮಾತೆಗೆ ಅಭಿಷೇಕ ಹಾಗೂ ಗೋ ಪೂಜೆಯ ಮುಖಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ನಂತರ ವಿವಿಧ ಸಾಂಸ್ಕೃತಿಕ ಕಲಾ ತಂಡಗಳಿಂದ ಭಾರತ ಮಾತೆಯ ಉತ್ಸವ ಮೂರ್ತಿಯನ್ನು ಗ್ರಾಮದ ರಾಜ್ಯ ಬಿದಿಗಳಲ್ಲಿ ಮೆರವಣಿಗೆ ನಡಿಸಿ ಸಂಜೆ 7:00 ಕ್ಕೆ ಭಾರತ ಮಾತೆ ದೇವಾಲಯದ ಆವರಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದ್ದಾರೆ. ಇನ್ನು

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಬಾಲ ವಾಗ್ಮಿ ಕುಮಾರಿ ಹಾರಿಕಾ ಮಂಜುನಾಥ್ ಹಾಗು ಮುಖ್ಯ ಅತಿಥಿಗಳಾಗಿ ಶಾಸಕ ಡಾ.ಕೆ.ಸುಧಾಕರ್ ವಿಧಾನ ಪರಿಷತ್ ಸದಸ್ಯರಾದ ವೈ.ಎ.ನಾರಾಯಣ ಸ್ವಾಮಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಇದೇ ಸಂದರ್ಭದಲ್ಲಿ ಕಾರ್ಯಕಾರಿ ಸಮತಿಯ ಎನ್ .ಸಿ.ಶ್ರೀರಾಮಯ್ಯ ಉಪಾಧ್ಯಕ್ಷರು ,ಮೃತ್ಯುಂಜಯ ಸಿ.(ಜಯಣ್ಣ) ಕಾರ್ಯದರ್ಶಿ ,ದರ್ಶನ್ ರೆಡ್ಡಿ ಖಜಾಂಚಿ ಸದಸ್ಯರುಗಳಾದ ಎನ್ .ಎಂ.ಚಿನ್ನಪ್ಪರೆಡ್ಡಿ,ಎ.ವಿ.ನಾಗರಾಜು.ಅಶ್ವತ್ಥನಾರಾಯಣರೆಡ್ಡಿ,ಸಿ.ಎ.ನಾಗರಾಜು,ಕೆ.ರಘುನಾಥರೆಡ್ಡಿ,ಎನ್ ಆರೊ,ಭರತ್ ರೃಡ್ಡಿ,ಎನ್. ವೆಂಕಟೇಶಗೌಡ,ಹೆಚ್ .ಟಿ.ಮುಳುರಪ್ಪ,ಶ್ರೀಮತಿ ಬೃಂದ ರವಿನಾರಾಯಣರೆಡ್ಡಿ,ಸಿ.ಸುದೀರ್ ರೆಡ್ಡಿ, ಎಸ್, ಕೃಷ್ಣಪ್ಪ,ಎನ್ ಕೆ ಮಧನಗೋಪಾಲರೆಡ್ಡಿ,ಎಂ ಟಿ ವೆಂಕಟಸ್ವಾಮಿಗೌಡ,ನರಸಿಂಹಯ್ಯ ,ಎನ್ ,ಎಸ್ ,ನಾಗೇಶ್ ರೆಡ್ಡಿ ಉಪಸ್ತಿತರಿದ್ದರು.



# ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆ

ಬೆಂಗಳೂರು : ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರಿನಲ್ಲಿರುವ ಪೌರಾಡಳಿತ ನಿರ್ದೇಶನಾಲಯದಲ್ಲಿ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್. ನಾಗಾಭರಣ ಅವರು ಮಾತನಾಡಿ, ಪೌರಾಡಳಿತ ನಿರ್ದೇಶನಾಲಯದ ಅಡಿಯಲ್ಲಿ ಬರುವ ಶಾಲಾ-ಕಾಲೇಜಿನ ಪ್ರಾಂಶುಪಾಲರ ನೇಮಕಾತಿಯಲ್ಲಿ ಕನ್ನಡ ಮಾಧ್ಯಮದ ಅಭ್ಯರ್ಥಿಗಳನ್ನು ಕಡೆಗಣಿಸುವುದು ಸರಿಯಲ್ಲ.

ಕಟ್ಟುನಿಟ್ಟಾಗಿ ಕನ್ನಡ ಭಾಷಾ ಅನುಷ್ಠಾನದ ಆದೇಶವನ್ನು ಪಾಲಿಸಬೇಕಿರುವುದು ಪೌರಾಡಳಿತ ನಿರ್ದೇಶನಾಲಯದ ಜವಾಬ್ದಾರಿಯಾಗಿದೆ. ಹಾಗಾಗಿ ಮುಂದಿನ ನೇಮಕಾತಿ ಸಂದರ್ಭದಲ್ಲಿ ಕನ್ನಡ ಮಾಧ್ಯಮದಲ್ಲಿ ನಿಯಮಾನುಸಾರ ಪದವಿ ಪಡೆದವರನ್ನು ಕೂಡ ಪ್ರಾಂಶುಪಾಲರ ಹುದ್ದೆಗೆ ಪರಿಗಣಿಸಬೇಕೆಂದು ಸೂಚಿಸಿದರು.

ಪೌರಾಡಳಿತ ನಿರ್ದೇಶನಾಲಯದ ಅಧೀನದಲ್ಲಿ ನಡೆಯುವ ಎಲ್ಲಾ ವ್ಯವಹಾರವನ್ನು ಕನ್ನಡದಲ್ಲಿಯೇ ನಡೆಸಬೇಕು ಹಾಗೂ 6 ಸ್ಮಾರ್ಟ್‌ಸಿಟಿಗಳ ಕಛೇರಿಗಳ ಆಯುಕ್ತರ ಅಧೀನಕ್ಕೆ ಒಳಪಟ್ಟಿರುವ ಆಡಳಿತವನ್ನು ಸ್ಥಳೀಯ ಭಾಷೆಯಲ್ಲಿ ನಡೆಸಬೇಕು, ಅವುಗಳಲ್ಲಿ ಪ್ರಧಾನವಾಗಿ ಕನ್ನಡ ಭಾಷೆಯನ್ನು ಬಳಸಬೇಕೆಂದು ತಿಳಿಸಿದರು.

ಪೌರಾಡಳಿತ ನಿರ್ದೇಶನಾಲಯದ ಅಧೀನದಲ್ಲಿ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟಟ್ಟಣ ಪಂಚಾಯಿತಿ ಸೇರಿದಂತೆ ಒಟ್ಟು 280 ಅಂತರ್ಜಾಲ ತಾಣಗಳಿದ್ದು, ಅವುಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಹಕ್ಕೊತ್ತಾಯದ ಮೇರೆಗೆ ಮುಖಪುಟದೊಂದಿಗೆ ಎಲ್ಲಾ ಒಳ ಮಾಹಿತಿಗಳನ್ನು ಕನ್ನಡದಲ್ಲಿ ಸಾರ್ವಜನಿಕರಿಗೆ ಒದಗಿಸುತ್ತಿರುವುದು ಅಭಿನಂದನಾರ್ಹ ಎಂದರು.

ಪೌರಾಡಳಿತ ನಿರ್ದೇಶನಾಲಯದಲ್ಲಿ ಸಭೆ ನಡೆಸಿ, ಕನ್ನಡ ಅನುಷ್ಠಾನ ಸಂಬಂಧ ಸಲಹೆ ಮತ್ತು ಸೂಚನೆಗಳನ್ನು ನೀಡಿದ ಪರಿಶೀಲನಾ ತಂಡವು ನಂತರ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಹಾಗೂ ಹೊಸಕೆರೆ ಹಳ್ಳಿಯಲ್ಲಿರುವ ಪಿಇಎಸ್ ವಿಶ್ವವಿದ್ಯಾಲಯಕ್ಕೂ ಭೇಟಿ ನೀಡಿ ಕನ್ನಡ ಭಾಷಾ ಅನುಷ್ಠಾನ ಪ್ರಗತಿ ಪರಿಶೀಲನೆ ಸಭೆಯನ್ನು ನಡೆಸಿತು. ಅಲ್ಲಿ ಕುಲಪತಿಗಳಾದ ಶ್ರೀ ದೊರೆಸ್ವಾಮಿಗಳೊಡನೆ ಚರ್ಚಿಸಿದ ಪರಿಶೀಲನಾ ತಂಡವು ಪಿಇಎಸ್ ವಿಶ್ವವಿದ್ಯಾಲಯದ ವತಿಯಿಂದ ಕನ್ನಡಕ್ಕೊಂದು ಸರ್ಚ್ ಇಂಜಿನ್ ಸಿದ್ಧಪಡಿಸುವಂತೆ ಕೋರಿತು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳಾದ ಡಾ.ಕೆ.ಮುರಳಿಧರ ಅವರು, ಟಿ.ಎಸ್.ನಾಗಾಭರಣ ಅವರ ಆಪ್ತ ಕಾರ್ಯದರ್ಶಿ ಡಾ.ವೀರಶೆಟ್ಟಿ ಅವರು, ಪರಿಶೀಲನಾ ತಂಡದ ಸದಸ್ಯರಾದ ಪ್ರೊ.ಪಿ.ವಿ.ನಿರಂಜನಾರಾಧ್ಯ, ಪ್ರೊ.ಲಿಂಗರಾಜು, ಗಣಕ ಪರಿಷತ್ತಿನ ಕಾರ್ಯದರ್ಶಿ ನರಸಿಂಹಮೂರ್ತಿ ಇನ್ನಿತರರು ಪಾಲ್ಗೊಂಡಿದ್ದರು ಎಂದು ಪ್ರಕಟಣೆ ತಿಳಿಸಿದೆ.

# ಧರ್ಮ ಚಿಂತನೆ ಕಾರ್ಯಕ್ರಮದಲ್ಲಿ ಹೆಚ್ಚಿನ ಜನರು ಪಾಲ್ಗೊಳ್ಳುವಂತೆ ಧಾರ್ಮಿಕ ಚಿಂತಕ ತಳಗವಾರ ಆನಂದ್



ಗೌರಿಬಿದನೂರು : ಸದ್ಗುರು ಶ್ರೀಯೋಗಿನಾರೇಯಣ ಮಠದ ವತಿಯಿಂದ ಮುಂಬರುವ ಫೆಬ್ರವರಿ 8ನೇ ತಾರೀಖಿನಂದು ಗೌರಿಬಿದನೂರಿನ ಡಾ.ಹೆಚ್.ಎನ್. ಕಲಾಭವನದಲ್ಲಿ ಧರ್ಮ ಚಿಂತನೆ ಕಾರ್ಯಕ್ರಮ ನಡೆಯಲಿದೆ ಎಂದು ಧಾರ್ಮಿಕ ಚಿಂತಕರಾದ ತಳಗವಾರ ಆನಂದ್ ತಿಳಿಸಿದರು.

ಗೌರಿಬಿದನೂರು ನಗರದ ಮರಿಗಮ್ಮ ಸಲ್ಲಾಪುರಮ್ಮ ದೇವಸ್ಥಾನದ ಆವರಣದಲ್ಲಿ ಕರೆದಿದ್ದ ಧಾರ್ಮಿಕ ಸಂಘಸಂಸ್ಥೆಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಕ್ಷೇತ್ರ ಕೈವಾರದ ಧರ್ಮಾಧಿಕಾರಿ ಡಾ.ಎಂ.ಆರ್. ಜಯರಾಮ ರವರು ಅಧ್ಯಕ್ಷತೆ ವಹಿಸಲಿದ್ದು ಹಿರಿಯ ಆಧ್ಯಾತ್ಮಿಕ ಚಿಂತಕರು ಹಾಗೂ ಮಾಸ ಪತ್ರಿಕೆಯ ಸಂಪಾದಕರಾದ ಡಾಕ್ಟರ್ ಬಾಬು ಕೃಷ್ಣ ಮೂರ್ತಿ ಈ ಕಾರ್ಯಕ್ರಮಕ್ಕೆ ಎಲ್ಲಾ ಭಜನಾ ಮಂಡಳಿಗಳು ದಾಸ ಸಾಹಿತ್ಯ ಸಂಘಟನೆಗಳು ಜನಾಂಗದ ಧಾರ್ಮಿಕ ಸಂಘಟನೆಗಳ ಮುಖಂಡರು ಸಾಂಸ್ಕೃತಿಕ ಸಂಘಟನೆಗಳು ಪಾಲ್ಗೊಂಡು ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕೆಂದು ಕೋರಿದರು.

ಕೈವಾರದ ಸಂಕೀರ್ತನಾ ಯೋಜನೆಯ ಸಂಚಾಲಕರಾದ ಶ್ರೀಯುತ ಬಾಲಕೃಷ್ಣ ಭಾಗವತರವರು ಮಾತನಾಡಿ ಕಾಲಜ್ಞಾನಿ ಕೈವಾರ ತಾತಯ್ಯನವರ ತತ್ವ ಬೋಧನೆ ಪದಗಳನ್ನು ಸಮಾಜದ ಎಲ್ಲ ವರ್ಗದ ಜನರು ತಿಳಿದುಕೊಳ್ಳುವ ಮೂಲಕ ಸಾಮಾಜಿಕ ಮತ್ತು ಧಾರ್ಮಿಕ ಚಿಂತನೆಯನ್ನು ಬೆಳೆಸಿಕೊಳ್ಳಬೇಕು ಎಂಬ ಕಾರಣದಿಂದ ಧರ್ಮಾಧಿಕಾರಿ ಎಂ.ಆರ್. ಜಯರಾಂ ಅವರು ಇಂತಹ ಕಾರ್ಯಕ್ರ ಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಅವರ ಸೂಚನೆಯಂತೆ ಗೌರಿಬಿದನೂರಿನಲ್ಲಿಯೂ ಧರ್ಮಚಿಂತನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದ ಅವರು ಗೌರಿಬಿದನೂರು ತಾಲ್ಲೂಕಿನಲ್ಲಿ ಧಾರ್ಮಿಕ ಕಾರ್ಯಕ್ರಮಗಳಿಗೆ ತನ್ನದೇ ಆದ ವಿಶಿಷ್ಟತೆ ಇದೆ ತಾಲ್ಲೂಕಿನಲ್ಲಿ ಸುಮಾರು 5000 ಭಜನಾ ಮಂಡಳಿಗಳಿದ್ದು ಎಲ್ಲ ಜಾತಿ ಜನಾಂಗದವರು ಜಾತಿ ಭೇದ ಮರೆತು ಈ ಧಾರ್ಮಿಕ ಕಾರ್ಯಕ್ರಮಕ್ಕೆ ಆಗಮಿಸುವ ಮೂಲಕ ಭಗವಂತನ ಕೃಪೆಗೆ ಪಾತ್ರರಾ ಗಬೇಕು ಎಂದರು.

ಧಾರ್ಮಿಕ ಚಿಂತನೆಗಳು ಕಡಿಮೆಯಾಗಿ ಒತ್ತಡದ ಬದುಕು ನಡೆಸುತ್ತಿರುವ ಇಂದಿನ ದಿನಗಳಲ್ಲಿ ಕೈವಾರ ತಾತಯ್ಯನವರ ಕಾಲಜ್ಞಾನ ಭಗವನ್ನಾಮ ಸಂಕೀರ್ತನೆ ಸ್ಮರಣೆ ಚಿಂತನೆಗಳಲ್ಲಿ ತೊಡಗುವ ಮೂಲಕ ಮಾನವ ಜನ್ಮದ ಶ್ರೇಷ್ಠತೆಯನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂದು ಅವರು ತಿಳಿಸಿದರು.

ಯೋಗಿನಾರಾಯಣ ಮಠದ ನಿರ್ದೇಶಕರಾದ ನರಸಿಂಹಪ್ಪ ಅವರು ಮಾತನಾಡಿ ಕೈವಾರ ತಾತಯ್ಯನವರ ತತ್ವಪದಗಳು ಕರ್ನಾಟಕ ಆಂಧ್ರ ತಮಿಳುನಾಡು ಭಾಗಗಳಲ್ಲಿ ಜನರ ಬಾಯಲ್ಲಿ ನಾಣ್ಣುಡಿಯಂತೆ ಇಪ್ಪತ್ತು ವರ್ಷಗಳ ಹಿಂದೆ ಅದನ್ನು ಪುಸ್ತಕ ರೂಪದಲ್ಲಿ ತರಲಾಗಿದೆ ಅವರು ತಮ್ಮ ಜೀವನಾನುಭವವನ್ನು ತತ್ವಪದಗಳನ್ನು ಹಾಡುವ ಮೂಲಕ ಜನರಿಗೆ ತಿಳಿಸಿದ್ದರು ಎಂದು ಅವರು ತಿಳಿಸಿದರು.

ಕಸಾಪ ಮಾಜಿ ಅಧ್ಯಕ್ಷ ವೀರಣ್ಣ ಮಾತನಾಡಿ ಗೌರಿಬಿದನೂರಿನಲ್ಲಿ ಇಂತಹ ಧಾರ್ಮಿಕ ಕಾರ್ಯಕ್ರಮ ನಡೆಯುತ್ತಿರುವುದು ಆಸ್ತಿಕ ಜನರ ಸೌಭಾಗ್ಯವಾಗಿದ್ದು ತಾಲ್ಲೂಕಿನ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಅವರು ಇದೇ ಸಂಧರ್ಭದಲ್ಲಿ ಮನವಿ ಮಾಡಿಕೊಂಡರು.

ಸಭೆಯಲ್ಲಿ ತಾಲೂಕು ಬಲಿಜ ಸಂಘದ ಅಧ್ಯಕ್ಷರಾದ ಗಂಗಾಧರಪ್ಪ, ಶ್ರೀಧರ್, ಮಾಜಿ ನಗರಸಭಾ ಸದಸ್ಯ ಅನಂತರಾಜು, ವಿವಿಧ ಜನಾಂಗಗಳ ಹಾಗೂ ಧಾರ್ಮಿಕ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.ಡದ ಬದುಕು ನಡೆಸುತ್ತಿರುವ ಇಂದಿನ ದಿನಗಳಲ್ಲಿ ಕೈವಾರ ತಾತಯ್ಯನವರ ಕಾಲಜ್ಞಾನ ಭಗವನ್ನಾಮ ಸಂಕೀರ್ತನೆ ಸ್ಮರಣೆ ಚಿಂತನೆಗಳಲ್ಲಿ ತೊಡಗುವ ಮೂಲಕ

# ಸಹಕಾರ ಸಂಘದ ಚುನಾವಣಾ ಪ್ರಚಾರದ ಅಬ್ಬರ

2020ನೇ ಸಾಲಿನ ಆಡಳಿತ ಮಂಡಳಿಯನ್ನು ಆಯ್ಕೆ ಮಾಡುವ ಅಧಿಕಾರ ಸರ್ಕಾರ ಸಂಘಗಳ ಷೇರುದಾರರಿಗಿದ್ದು ಅದರಂತೆ ಬಾಗಲೂರು ಹಾಗೂ ಮಾರೇನಹಳ್ಳಿ ವ್ಯವಸಾಯ ಸಹಕಾರ ಸಂಘಕ್ಕೆ ಸ್ಪರ್ಧಿಸಿರುವ ಸ್ಪರ್ಧಿಗಳು ಬರದಿಂದ ಸಂಘಗಳ ಷೇರುದಾರರನ್ನು ಸಂಪರ್ಕಿಸಿ ತಮ್ಮ ತಂಡಕ್ಕೆ ಮತ ನೀಡುವಂತೆ ಕೋರಿದರು.

ಬಾಗಲೂರಿನ ಎ. ವೆಂಕಟರಾಜು ಮತ್ತು ಅವರ ತಂಡವು ಬಾಗಲೂರು, ಬಾಗಲೂರು ಕಾಲೋನಿ, ರಜಾಕ್ ಸಾಬ್ ಪಾಳ್ಯ, ಬುಡೇನ್ ಸಾಬ್ ಪಾಳ್ಯ, ಮಸ್ತಾನ್ ಸಾಬ್ ಪಾಳ್ಯ, ಮೊದಲಾದೆಡೆ ಪ್ರಚಾರ ನಡೆಸಿ ಮತಯಾಚಿಸಿದರು. ಇವರೊಂದಿಗೆ ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಬಿ.ಎನ್. ಪ್ರಭುಸ್ವಾಮಿ ಅನಿಲ್ ಕುಮಾರ್ ಹಾಗೂ ಹಿರಿಯ ರಾಜಕಾರಣಿ ಆದೂರ್ ನಟರಾಜ್ ಮೊದಲಾದ ಮುಖಂಡರು ಪಾಲ್ಕೊಂಡು ಮತಯಾಚಿಸಿದರು.

# ಪ್ರತಿಜ್ಞಾ ಬೋಧನೆ



ಯಲಹಂಕ : ದಿನಾಂಕ 25-01-2020 ರ ನಾಲ್ಕನೇ ಶನಿವಾರ ಸರಕಾರಿ ಕಚೇರಿಗಳಿಗೆ ರಜಾ ದಿನವಾದ್ದರಿಂದ ಜನವರಿ 24 ರಂದೇ ಮತದಾರರಿಗೆ ಪ್ರತಿಜ್ಞಾ ವಿಧಿ ಬೋಧಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.


ಯಲಹಂಕದ ಸರ್ಕಾರಿ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಲ್ಲ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು ತಹಸೀಲ್ದಾರ್ ಎನ್. ರಘುಮೂರ್ತಿ ಚುನಾವಣಾ ಶಿರಸ್ತೇದಾರ್ ಎಸ್.ಜಿ ಪ್ರಸನ್ನ ಕುಮಾರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಶ್ರೀರಾಮಪ್ಪ ಹಾಗೂ ಕಾಲೇಜಿನ ಸಿಬ್ಬಂದಿ ವರ್ಗ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# 67.ಲಕ್ಷ ರೂ.ಗಳ ವ್ಯಾಪಾರಿ ಮಳಿಗೆ ನಿರ್ಮಾಣಕ್ಕೆ ಡಿಸಿಎಂ:; ಲಕ್ಷ್ಮಣ ಸವದಿ ಭೂಮಿ ಪೂಜೆ

ಅಥಣಿ : ಪಟ್ಟಣದಲ್ಲಿರುವ ಬಸ್ ನಿಲ್ದಾಣದಲ್ಲಿ 67 ಲಕ್ಷ ರೂ.ಗಳ ವ್ಯಾಪಾರಿ ಮಳಿಗೆ ನಿರ್ಮಾಣ ಕಾರ್ಯಕ್ಕೆ ಭೂಮಿ ಪೂಜೆಯನ್ನು ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರು ನೇರವೆರಿಸಿದರು. ಮತ್ತು ಅಥಣಿ ನಗರದಲ್ಲಿ ಒಂದು ಆರ್ ಟಿ ಓ ಕಛೇರಿ ಸ್ಥಾಪನೆಗೆ ಸರಕಾರ ಮಂಜೂರಾತಿ ನೀಡಿದ್ದು ಸೂಕ್ತ ಬಾಡಿಗೆ ಕಟ್ಟಡದಲ್ಲಿ ತಕ್ಷಣದಲ್ಲೆ ಪ್ರಾರಂಭಿಸಲಾಗುವದು ಎಂದು ತಿಳಿಸಿದರು.

ಪಟ್ಟಣದ ನಿರೀಕ್ಷಣಾ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿದ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಅವರು ವಿವಿಧ ಇಲಾಖೆಗಳಿಂದ ಮುಂಜೂರು ಆಗಿರುವ ಕಾಮಗಾರಿಗಳ ಬಗ್ಗೆ ಮಾಹಿತಿ ನೀಡಿದರು. ನನಗೆ ಬಿ ಎಸ್ ಯಡಿಯೂರಪ್ಪನವರ ಸಚಿವ ಸಂಪುಟದಲ್ಲಿ ಕೃಷಿ ಇಲಾಖೆ ಹಾಗೂ ಸಾರಿಗೆ ಇಲಾಖೆಯ ಜವಾಬ್ದಾರಿಗಳನ್ನು ನೀಡಿದ್ದಾರೆ. ನನಗೆ ವಹಿಸಿರುವ ಇಲಾಖೆಗಳಿಂದ ನನ್ನ ಕ್ಷೇತ್ರಕ್ಕೆ ಯಾವ ಯಾವ ಸವಲತ್ತುಗಳನ್ನು ನೀಡಲು ಸಾದ್ಯವಿದೆ ಅದನ್ನು ನೀಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ

ಅಥಣಿ ಜನರ ಬಹುದಿನಗಳ ಬೆಡಿಕೆಯಾಗಿದ್ದ ಸಹಾಯಕ ಸಾರಿಗೆ ಅಧಿಕಾರಿಗಳ ಕಛೇರಿ( ಆರ್ ಟಿ ಓ)ಯನ್ನು ಮಂಜೂರು ಮಾಡಲಾಗಿದೆ ಸದ್ಯದಲ್ಲೆ ಕಛೇರಿಯನ್ನು ಪ್ರಾರಂಭಿಸಿ ಅಥಣಿ, ಕಾಗವಾಡ, ರಾಯಬಾಗ ತಾಲೂ ಕುಗಳನ್ನೊಳಗೊಂಡ ಎಲ್ಲ ಜನರಿಗೆ ಅನುಕೂಲ ಮಾಡಿಕೊಡಲಾಗುತ್ತದೆ ಎಂದು ಹೇಳಿದರು. ಅಲ್ಲದೆ ಅಥಣಿ ತಾಲುಕಿನಲ್ಲಿ ಕೃಷಿ ಆಧಾರಿತ



ರೈತಾಪಿ ವರ್ಗ ಬಹು ಸಂಖ್ಯೆಯಲ್ಲಿ ಇದ್ದಾರೆ. ರೈತನ ಮಕ್ಕಳಿಗೆ ಅತ್ಯಾಧುನಿಕ ಕೃಷಿ ತರಬೇತಿ ಪಡೆಯಲು ಕೃಷಿ ಡಿಪ್ಲೋಮಾ, ಹಾಗೂ ಕೃಷಿಯಲ್ಲಿ ಡಿಗ್ರಿ ಪಡೆಯಲು ಕೃಷಿ ಕಾಲೇಜು ಪ್ರಾರಂಭಸುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಅದಕ್ಕಾಗಿ ಇಗಾಗಲೆ ತಾಲೂಕಿನ ಕೊಕಟ ನೂರು ಗ್ರಾಮದ ಬಳಿ 100ಎಕರೆ ಪ್ರದೇಶವನ್ನು ಗುರುತು ಮಾಡಿದ್ದು, ಕೃಷಿ ಮಹಾವಿದ್ಯಾಲಯದ ಅಧಿನದಲ್ಲಿ ಕೃಷಿ ಕಾಜೇಜು ಮುಂಜೂರು ಮಾಡಿ ಬರುವ ಬಜೇಟ್ ನಲ್ಲಿ ಹಣಕಾಸಿನ ಮಂಜೂ ರಾತಿಯನ್ನು ಪಡೆದುಕೊಂಡು ಒಟ್ಟು ಕಾಮಗಾರಿಗೆ 128 ಕೋಟಿ ರೂ.ಗಳನ್ನು ಅಂದಾಜು ಮಾಡಿಲಾಗಿದೆ ಕಾಲೇಜು ಕಾಮಗಾರಿಯನ್ನು 2 ವರ್ಷದಲ್ಲಿ ಪೂರ್ಣ ಮಾಡುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಈ ಭಾಗದಲ್ಲಿ ಈಗಾಗಲೆ ಪಶುವೈದ್ಯಕೀಯ ಕಾಲೇಜು ಮಂಜೂರಾಗಿ ಕಟ್ಟಡ ಕಾಮಗಾರಿ ಮುಗಿದ್ದಿದ್ದು, ಇನ್ನುಳಿದ ಕಾಮಗಾರಿಗಾಗಿ ಹಣವನ್ನು ಮಂಜೂರು ಮಾಡಿ ಇನ್ನು ಬರುವ ಶೈಕ್ಷಣೀಕ ವರ್ಷದಲ್ಲಿ ಪಶುವೈ ಧ್ಯಕೀಯ ಕಾಲೇಜು ಪ್ರಾರಂಭಿಸಲಾಗು ವದು ಎಂದು ಹೇಳಿದರು.

ಮುಖ್ಯಮಂತ್ರಿ ಪರಿಹಾರ ನೀಧಿ ಚೇಕ ವಿತರಣೆ:

ಅಥಣಿ ತಾಲೂಕಿನ ವಿವಿ ಧ ರೋಗಗಳಿಗೆ ತುತ್ತಾಗಿ ವೈದ್ಯಕೀಯ ಸೇವೆ ಪಡೆದಿರುವ ಬಡ ಫಲಾನುಭವಿಗಳಿಗೆ ಡಿಸಿಎಂ ಲಕ್ಷ್ಮಣ ಸವದಿ ಅವರು ಮುಖ್ಯಮಂತ್ರಿ ಪರಿಹಾರ ನಿಧಿ ಚೇಕ್ ಗಳನ್ನು ವಿತರಣೆ ಮಾಡಿದರು. ಪಟ್ಟಣದ ನೀರಿಕ್ಷಣಾ ಮಂದಿರದಲ್ಲಿ ಸರಳವಾಗಿ 20ಕ್ಕೂ ಹೆಚ್ಚು ಜನ ಫಲಾನುಭವಿಗಳಿಗೆ ಚೆಕ್ ವಿರತಣೆ ಮಾಡಿದರು.

ಸಾರಿಗೆ ತೆರಿಗೆ ದೇಶದಲ್ಲಿ ಏಕ್ ರೂಪದಲ್ಲಿ ಜಾರಿಗೊಳಿಸುವ ಚಿಂತನೆ: ಸದ್ಯ ದೇಶದಲ್ಲಿರುವ ಎಲ್ಲ ರಾಜ್ಯ ಸರಕಾರಗಳು ಬೇರೆ ಬೇರೆ ರೀತಿಯಲ್ಲಿ ರೋಡ್ ಟ್ಯಾಕ್ಷ ಜಾರಿಯಲ್ಲಿದೆ.

ಆದರೆ ದೇಶದ ಸಾರಿಗೆ ಸಚಿವರು ಒಂದು ದೇಶ ಒಂದು ತೆರಿಗೆ ಜಾರಿಗೆ ತರುವ ಚಿಂತನೆ ನಡೆಸುತ್ತಿದ್ದಾರೆ. ಬರುವ ಕೇಂದ್ರ ಬಜೇಟ್ ನಲ್ಲಿ ಈ ಕುರಿತು ನಿರ್ಣಯವಾದರೆ ಇಡಿ ದೇಶದಲ್ಲಿ ಒಂದೆ ರೀತಿಯ ಸಾರಿಗೆ ಟ್ಯಾಕ್ಷ ನೀತಿ ಜಾರಿಯಾಗುತ್ತದೆ. ರಾಜ್ಯದಲ್ಲಿ ರೋಡ್ ಟ್ಯಾಕ್ಷ ಪ್ರಮಾಣ ಹೆಚ್ಚು ಇರುವದರಿಂದ ಬಹಳಷ್ಟು ವಾಹನ ಮಾಲಿಕರು ಬೆರೆ ರಾಜ್ಯಗಳಲ್ಲಿ ಹೋಗಿ ತಮ್ಮ ವಾಹನಗಳನ್ನು ನೊಂದಣಿ ಮಾಡಿಕೊಳ್ಳುತ್ತಿದ್ದಾರೆ. ಇದರಿಂದಾಗಿ ರಾಜ್ಯಕ್ಕೆ ಬರುವ ರೋಡ್ ಟ್ಯಾಕ್ಷ ಕಡಿಮೆಯಾಗುತ್ತಿದೆ. ಒಂದು ದೇಶ ಒಂದೆ ಟ್ಯಾಕ್ಷ ಇದ್ದರೆ ರಾಜ್ಯ ಜನರು ಅದೆ ರಾಜ್ಯದಲ್ಲಿ ತಮ್ಮ ವಾಹನಗಳನ್ನು ನೊಂದಣಿ ಮಾಡಿಕೊಳ್ಳುತ್ತಾರೆ ಎಂದು ಡಿ ಸಿ ಎಂ ಲಕ್ಷ್ಮಣ ಸವದಿ ಹೇಳಿದರು.

840 ಕೋಟಿ ವಿಜಪೂರ-ಗೋಟೂರ ರಾಷ್ಟ್ರೀಯ ಹೆದ್ದಾರ ಟೇಂಡರ್ :

ವಿಜಯಪೂರ-ಸಂಕೇಶ್ವರ ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತನೆ ಮಾಡಿ 4 ಹಂತಗಳಲ್ಲಿ ಕಾಮಗಾರಿ ಪ್ರಾರಂಭಿಸುವ ಭರವಸೆಯನ್ನು ಕೇಂದ್ರ ಸಾರಿಗೆ ಸಚಿವ ನಿತೀನ್ ಗಡ್ಕರಿ ಅವರಿ ನೀಡಿದ್ದಾರೆ. ಮೊದಲ 2 ಹಂತದ ಕಾಮಗಾರಿಯ ಟೆಂಡರ್ ಪ್ರಕ್ರೀಯನ್ನು ಪ್ರಾರಂಭ ಮಾಡಿದ್ದಾರೆ. ರಾಜ್ಯ ಸರಕಾರ ರಸ್ತೆ ಅಭಿವೃದ್ದಿಗೆ ಬೇಕಾಗುವ ಜಮೀನು ಒದಗಿಸುವ ಕಾರ್ಯ ಮಾಡಿಕೊಟ್ಟ ಕೂಡಲೆ ಕಾಮಗಾರಿ ಪ್ರಾರಂಭ ಮಾಡುವದಾಗಿ ಹೇಳಿದ್ದಾರೆ

# ಟ್ರ್ಯಾಕ್ಟರ್ ಗೆ ಬೈಕ್ ಡಿಕ್ಕಿ ಸವಾರ ಸಾವು



ಶಿಡ್ಲಘಟ್ಟ : ತಾಲ್ಲೂಕಿನ ಅಬ್ಲೂಡು ಮಲ್ಲಹಳ್ಳಿಯ ಸಮೀಪ ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದ ಟ್ರ್ಯಾಕ್ಟರ್ ಟ್ಯಾಂಕರ್ ಗೆ ದ್ವಿಚಕ್ರ ವಾಹನ ರಭಸವಾಗಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿದ್ದಾರೆ.

ತಾಲ್ಲೂಕಿನ ಕಸಬಾ ಹೋಬಳಿಯ ಕೋಟಹಳ್ಳಿ ಗ್ರಾಮದ ನಿವಾಸಿಯಾದ ರಮೇಶ್(25) ಎಂಬ ವ್ಯಕ್ತಿ ರಾತ್ರಿ 8 ಘಂಟೆ ಸಮಯದಲ್ಲಿ ಶಿಡ್ಲಘಟ್ಟದಿಂದ ದಿಬ್ಬೂರಹಳ್ಳಿ ಮುಖ್ಯ ರಸ್ತೆ ಕೋಟಹಳ್ಳಿಗೆ ಚಲಿಸುತ್ತಿರುವಾಗ ಮಲ್ಲಹಳ್ಳಿ ಮಾರ್ಗ ಮಧ್ಯದಲ್ಲಿ ನಿಲ್ಲಿಸಿದ್ದ ಟ್ಯಾಂಕರ್ ಗೆ ರಭಸವಾಗಿ ಹೊಡೆದ ಹಿನ್ನೆಲೆಯಲ್ಲಿ ತಲೆಗೆ ಬಲವಾದ ಗಾಯವಾಗಿ ರಕ್ತಸ್ರಾವ ಉಂಟಾಗಿದೆ.

ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಆ?ಯಂಬುಲೆನ್ಸ್ ನಲ್ಲಿ ತೆರಳುವಾಗ ಮಾರ್ಗ ಮದ್ಯೆ ಸಾವನ್ನಾಪ್ಪಿದ್ದಾನೆ ಕುಟುಂಬಸ್ಥರ ಅಕ್ರಂದನ ಮುಗಿಲು ಮುಟ್ಟುವಂತಿತ್ತು.

## ಕಲಾತ್ಮಕ ವರ್ಣಚಿತ್ರಗಳ ಮತ್ತು ಸಾಂಪ್ರದಾಯಿಕ ಉಡುಗೆಗಳ ಬೆಡಗಿನೊಂದಿಗೆ ವೋಗ್ ಇನ್ಸಿಟಿಟ್ಯೂಟ್ ಆಫ್ ಆರ್ಟ್ ಮತ್ತು ಡಿಸೈನ್‌ಕಾಲೇಜಿನಲ್ಲಿ ಗಣರಾಜ್ಯೋತ್ಸವ ಆಚರಣೆ ಫ್ಯಾಷನ್ ಡಿಸೈನ್ನೈನಿಂಗ್ ಮತ್ತು ಆರ್ಟ್

# ವಿದ್ಯಾರ್ಥಿಗಳಿಂದ ಸರಣಿ ಚಿತ್ರಗಳಮೂಲಕ ಸುಸ್ಥಿರ ಭಾರತದ ಚಿತ್ರಣ



ದೇವನಹಳ್ಳಿ : ಇಂದಿನ ಯುವ ಜನತೆ ಭಾರತದ ಸಂವಿಧಾನವನ್ನು ಗೌರವಿಸುವುದನ್ನೂಊ ಮೀರಿ ಸುಸ್ಥಿತ ಭಾರತದ ನಿರ್ಮಾಣದತ್ತ ಪ್ರಯತ್ನವನ್ನು ಮಾಡುತ್ತಿವೆನಮ್ಮ ರಾಷ್ಟ್ರ ಧ್ವಜದ ಹಸಿರು ಬಣ್ಣದಿಂದ ಸ್ಫೂರ್ತಿ ಪಡೆದ ವಿದ್ಯಾರ್ಥಿಗಳು ಭುಮಿಯ ಫಲವತ್ತತೆ ಮತ್ತು ಬೆಳವ ಣೊಗೆಯನ್ನು ಪ್ರತಿನಿಧಿಸುವ ಚಿತ್ರಗಳನ್ನು ವರ್ಣಗಳಲ್ಲಿ ಬಿಡಿಸುವುದರ ಮೂಲಕ ಗಣರಾಜ್ಯೋತ್ಸವವನ್ನು ವಿಶಿಷ್ಟವಾಗಿ ಆಚರಿಸುತ್ತಿರುವುದು ನಮಗೆ ಅತೀವ ಸಂತಸ ತಂದಿದೆ ಎಂದು ವೋಗ್ ಇನ್ಸಿಟಿಟ್ಯೂಟ್ ಆಫ್ ಆರ್ಟ್ ಮತ್ತು ಡಿಸೈನ್‌ಕಾಲೇಜಿನ ಸಂಸ್ಥಾಪಕರಾದ ಡಾ॥ ಎಂ>ಎಂ.ಕರಿಯಪ್ಪ ಹೇಳಿದರು.



ದೇವನಹಳ್ಳಿ ತಾಲ್ಲೂಕಿನ ಸುಣಘಟ್ಟ ಸಮೀಪದ ಕೆಐ.ಎಡಿಬಿ ಬಳಿ ಇರುವ ವೋಗ್ ಇನ್ಸಿಟಿಟ್ಯೂಟ್ ಆಫ್ ಆರ್ಟ್ ಮತ್ತು ಡಿಸೈನ್‌ಕಾಲೇಜಿನಲ್ಲಿ ಶುಕ್ರವಾರ ವರ್ಣಚಿತ್ರಗಳ ಮತ್ತು ಸಾಂಪ್ರದಾಯಿಕ ಉಡುಗೆಗಳ ಸ್ಪರ್ಧೆಯು ಮೂಲಕ ಗಣರಾಜ್ಯೋತ್ಸವ ಸಂಬ್ರಮಾಚಣೆಯನ್ನು ಉಧ್ಘಾಟಿಸಿ ಮಾತನಾಡಿದರು.

ವೋಗ್ ಇನ್‌ಸ್ಟಿಟ್ಯೂಟ್ ಆಫ್ ಆರ್ಟ್ ಮತ್ತು ಡಿಸೈನ್‌ನ ಬಿಎಸ್ ಸಿ ಮೂರನೇ ವರ್ಷದ ವಿದ್ಯಾರ್ಥಿನಿ ಮಹಾಲಕ್ಷ್ಮೀ ಕಾಮತ್ ಮಾತನಾಡಿ,ಗಣರಾಜ್ಯೋತ್ಸವವು ನಮ್ಮ ದೇಶವನ್ನು ಗೌರವಿಸುವ ಅಪರೂಪದ ಸಂದರ್ಭಗಳಲ್ಲಿ ಒಂದಾಗಿದೆ. ನಮ್ಮ ದೇಶ ಮತ್ತು ಅದರ ಬೆಳವಣಿಗೆಯ ಬಗ್ಗೆ ನಮ್ಮ ಪ್ರೀತಿ ಮತ್ತು ಗೌರವವನ್ನು ವ್ಯಕ್ತಪಡಿಸುವ ದಿನ ಅದು. ಭಾರತವನ್ನು ಒಂದು ಸುಸ್ಥಿರ ರಾಷ್ಟ್ರವನ್ನಾಗಿಸಲು ನಾನು ಬಯಸುತ್ತೇನೆ. ನಮ್ಮ ಕ್ಯಾಂಪಸ್‌ನಲ್ಲಿ ನಮ್ಮ ವರ್ಣಚಿತ್ರಗಳ ಮೂಲಕ ನಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಅವಕಾಶ ದೊರೆತಿರುವುದು ನಮಗೆ ಸಂತೋಷವಾಗಿದೆ" ಎಂದರು.

ವಿದ್ಯಾರ್ಥಿಗಳು ಸಾಂಪ್ರದಾಯಿಕ ಶೈಲಿಯಲ್ಲಿ ಭಾರತೀಯ ಉಡುಗೆ ತೊಟ್ಟು ರ್ಯಾಂಪ್ ವಾಕ್ ಮಾಡಿದರು.

ಸಾಂಪ್ರದಾಯಿಕ ಫ್ಯಾಷನ್ ಹೇಳಿಕೆಗಳಿಂದ ಸ್ಫೂರ್ತಿ ಪಡೆದ ವಿದ್ಯಾರ್ಥಿಗಳು ಫ್ಯಾಶನ್ ಶೋಗಾಗಿಯೇ ಡ್ರಾಪ್‌ಗಳನ್ನು ವಿನ್ಯಾಸಗೊಳಿಸಿದರು.


ಈ ಸಂದರ್ಭದಲ್ಲಿ ಖುಷಿಯಿಂದ ಗಣರಾಜ್ಯೋತ್ಸವವನ್ನು ಆಚರಿಸಿದ ವಿದ್ಯಾರ್ಥಿಗಳು ಸ್ಪ್ಲಾಶ್ಪೈಂಟಿಂಗ್ಗಳ ಮೂಲಕ ಸುಸ್ಥಿರ ಭಾರತದ ಕುರಿತ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಈ ಚಿತ್ರಗಳು ನಮ್ಮ ದೇಶದ ವಿದ್ಯಾರ್ಥಿಗಳ ಕಲ್ಪನೆಯ ಹೊಸ ದೃಷ್ಟಿಕೋನವನ್ನು ಪರಿಚಯಿಸಿದವು. ಹಾಗೇ ವೋಗ್ ಇನ್ಸ್ಟಿಟ್ಯೂಟ್ ಆಫ್ ಆರ್ಟ್ ಮತ್ತು ಡಿಸೈನ್ನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಕ್ಯಾಂಪಸ್ನಲ್ಲಿ ಸಸಿಗಳನ್ನು ನೆಟ್ಟರು ಮತ್ತು ಈ ಸಸಿಗಳು ನಮ್ಮ ದೇಶದ ಒಂದೊಂದು ರಾಜ್ಯವನ್ನು ಪ್ರತಿನಿಧಿಸುತ್ತವೆ.

ಹಾಗೇ ಕರ್ನಾಟಕವನ್ನು ಪ್ರತಿನಿಧಿಸಿ ಕ್ಯಾಂಪಸ್ನಲ್ಲಿ ಶ್ರೀಗಂಧದ ಸಸಿ ನೆಡಲಾಯಿತು ವಿದ್ಯಾರ್ಥಿಗಳು ಸಾಂಪ್ರದಾಯಿಕ ಶೈಲಿಯಲ್ಲಿ ಭಾರತೀಯ ಉಡುಗೆ ತೊಟ್ಟು ರ್ಯಾಂಪ್ ವಾಕ್ ಮಾಡಿದರು. ಸಾಂಪ್ರದಾಯಿಕ ಫ್ಯಾಷನ್ ಹೇಳಿ ಕೆಗಳಿಂದ ಸ್ಫೂರ್ತಿ ಪಡೆದ ವಿದ್ಯಾರ್ಥಿಗಳು ಫ್ಯಾಶನ್ ಶೋಗಾ ಗಿಯೇ ಡ್ರಾಪ್ಗಳನ್ನು ವಿನ್ಯಾಸ ಗೊಳಿಸಿದರು.

ಆಕರ್ಷಕ ವರ್ಣಚಿತ್ರಗಳನ್ನು ರಚಿಸಿದ ಮತ್ತು ಸಾಂಪ್ರದಾಯಿಕ ಉಉಗೆಗಳಿಗೆ ಆಧುನಿಕತೆಯ ಮೆರುಗು ನೀಡಿ ರ್‍ಯಾಂಪ್ ವಾಕ್ ಮಾಡಿದವರಿಗೆ ಬಹುಮಾನ ಮತ್ತು ಅರ್ಹತಾ ಪ್ರಮಾಣ ಪತ್ರ ವಿತರಿಸಲಾಯಿತು.

ವರ್ಣಚಿತ್ರಗಳೊಂದಿಗೆ ರಿಪಬ್ಲಿಕ್ ಡೇ ಕಾರ್ಯಕ್ರಮದಲ್ಲಿ ಇನ್ಸ್ಟಿಟ್ಯೂಟ್‌ನ ಪ್ರಾಂಶುಪಾಲರಾದ ಡಾ॥ ವಿಜಯಕುಮಾರ್, ಆರ್.ಜೆ.ರೆಡ್ ಎಫ್.ಎಂ ನ ಆರ್.ಜೆ ತುಹಿನ್, ಪಿ.ಆರ್.ಓ ಪೂಜಾ ಮತ್ತಿತರರಿದ್ದರು.

# ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ



ಬೆಂಗಳೂರು : ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ: 26-01-2020 ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯ ಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

ಖ ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

ಡ ಬೆಳಿಗ್ಗೆ 7.00 ಗಂಟೆಯಿಂದ ಬೆಳಿಗ್ಗೆ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಂಸ್ಥೆಯು ಸಹಯೋಗದೊಂದಿಗೆ ಓಂ ಇನ್‌ಸ್ಟ್ಯೂಟ್ ಆಫ್ ಡ್ಯಾನ್ಸ್ & ಮ್ಯೂಸಿಕ್, ತಂಡದವರಿಂದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಡ ಬೆಳಿಗ್ಗೆ 8.00 ಗಂಟೆಯಿಂದ ಬೆಳಿಗ್ಗೆ 9.00 ಗಂಟೆಯುವರೆಗೆ ಬಾಲಭವನ ಸೊಸೈಟಿ ಸಹಯೋಗದೊಂದಿಗೆ "ಉದ್ಯಾನವನದಲ್ಲಿ ಉದಯರಾಗ" ಎಂಬ ಶೀರ್ಷಿಕೆಯ ಕುಮಾರಿ ಸ್ನೇಹಶ್ರೀ ಹೆಗಡೆ ಮತ್ತು ಕುಮಾರಿ ಮೀರಾ ಮನೋಜ್ ತಂಡದವರಿಂದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

# 31 ನೇ ರಾಜ್ಯಮಟ್ಟದ ಗಾಳಿಪಟ ಉತ್ಸವ

ಬೆಂಗಳೂರು: ಚಾಮರಾಜನಗರ ಜಿಲ್ಲಾ ಪಂಚಾಯತ್ ರಾಜ್ಯ ಪ್ರವಾಸೋದ್ಯಮ ಇಲಾಖೆ, ಕರ್ನಾಟಕ ಜಾನಪದ ಪರಿಷತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ಜಾನಪದ ಪರಿಷತ್ತು ಜಿಲ್ಲಾ ಘಟಕ ಸಹಯೋಗದೊಂದಿಗೆ ಜನವರಿ 26 ರಂದು ಡಾ: ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ, ಚಾಮರಾಜನಗರದಲ್ಲಿ ಬೆಳಿಗ್ಗೆ 11-00 ಗಂಟೆಗೆ 31 ನೇ ರಾಜ್ಯಮಟ್ಟದ ಗಾಳಿಪಟ ಉತ್ಸವ -2020 ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕಾರ್ಮಿಕ ಸಚಿವ ಎಸ್. ಸುರೇಶ್‌ಕುಮಾರ್ ಅವರು ನೆರವೇರಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಾಮರಾಜನಗರದ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ವಹಿಸಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# ಇಮ್‌ಟೆಕ್ ಫಾರ್ಮಿಂಗ್20 &ಟೂಲ್‌ಟೆಕ್ 2020 ಉದ್ಘಾಟನೆ

ಬೆಂಗಳೂರು=:'ಭಾರತೀಯಯಂತ್ರ ಸಾಧನತಯಾರಕರ ಸಂಘ( ಐಎಮ್‌ಟಿಎಮ್‌ಎ) ಆಯೋಜಿಸಿದ 'ಇಮ್‌ಟೆಕ್ಸ್ ಫಾರ್ಮಿಂಗ್ 2020 &ಟೂಲ್‌ಟೆಕ್ 2020'ಯನ್ನು ಇಂದು ಬೆಂಗಳೂರಿನ ಅಂತರರಾಷ್ಟ್ರೀಯ ಪ್ರದರ್ಶನಕೇಂದ್ರ(ಬಿಐಇಸಿ)ದಲ್ಲಿಉದ್ಘಾಟಿಸಲಾಯಿತು. ಇದು, ಈವರೆಗೆಆಯೋಜಿಸಲಾಗಿರುವಅತಿದೊಡ್ಡಇಮ್‌ಟೆಕ್ ಫಾರ್ಮಿಂಗ್ ಪ್ರದರ್ಶನವಾಗಿದೆ.26 ದೇಶಗಳಿಂದ ಬಂದಿರುವ 602 ಪ್ರದರ್ಶನಕಾರರೊಂದಿಗೆ 33,000 ಚದರಡಿ ಪ್ರದೇಶದಲ್ಲಿ ನಡೆಯುವ' ಇಮ್‌ಟೆಕ್ಸ್ ಫಾರ್ಮಿಂಗ್ 2020 &ಟೂಲ್‌ಟೆಕ್ 2020', ಜ್ಞಾನ ಹಂಚಿಕೊಳ್ಳುವಿಕೆ ಮತ್ತು ವ್ಯಾಪಾರ ವ್ಯವಹಾರಗಳಿಗಾಗಿ ಒಂದು ಸಾಮಾನ್ಯ ವೇದಿಕೆಯಲ್ಲಿಇಡೀಜಾಗತಿಕಉತ್ಪಾದಕ ವರ್ಗದ ಭಾಗೀದಾರರನ್ನುಒಗ್ಗೂಡಿಸುತ್ತಿದೆ. ಉದ್ದಿಮೆಗಳು ಮಾಹಿತಿಯುಕ್ತ ನಿರ್ಧಾರಗಳನ್ನು ಕೈಗೊಳ್ಳುವುದಕ್ಕೆ ನೆರವಾಗಲುಹೈ-ಸ್ಪೀಡ್ ಲೇಸರ್‌ಕಟ್ಟಿಂಗ್ ಯಂತ್ರಗಳು, ಶೀಟ್ ಮೆಟಲ್ ವರ್ಕಿಂಗ್, ವೆಲ್ಡಿಂಗ್ ಹಾಗು ಜಾಯಿನಿಂಗ್, ಪ್ರೆಸ್ಸ್, ಮೆಟ್ರಾಲಜಿ, ಮತ್ತು ಸಿಎಡಿ/ಸಿಎಎಮ್ ಮುಂತಾದವುಗಳನ್ನು ಯಂತ್ರ ಸಾಧನತಯಾರಕರು ಪ್ರತ್ಯಕ್ಷ ಪ್ರದರ್ಶನ ಮಾಡಲಿದ್ದಾರೆ.ಅಡಿಟಿವ್‌ಉದ್ಯಮ ಹಾಗು ಉದ್ಯಮ 4.0 ಮೇಲೆ ಹೆಚ್ಚಿನಗಮನಕೇಂದ್ರೀಕರಣವಿದೆ. ಪ್ರದರ್ಶನದಲ್ಲಿ ಕೆಳಕಂಡ ಸಮಾನಾಂತರ ಕಾರ್ಯಕ್ರಮಗಳೂ ನೆರವೇರಲಿವೆ:




ು2ಅಕಾಡೆಮಿಯಾ ಪೆವಿಲಿಯನ್ (ಐಐಟಿಗಳೂ ಒಳಗೊಂಡಂತೆ 50ಕ್ಕಿಂತ ಹೆಚ್ಚಿನ ಸಂಸ್ಥೆಗಳಿಂದ ಭಾಗವಹಿಸುವಿಕೆ)

ಅಂತರರಾಷ್ಟ್ರೀಯಖರೀದಿದಾರ-ಮಾರಾಟಗಾರ ಸಭೆ(ಈಜಿಪ್ಟ್, ಫ್ರಾನ್ಸ್, ಗ್ವಾಟೆಮಾಲಾ, ಇರಾನ್, ಕೀನ್ಯ, ರಷ್ಯ, ಶ್ರೀಲಂಕಾ, ಯುಎಇ ಹಾಗು ಉಜ್ಬೆಕಿಸ್ತಾನ್ ಮುಂತಾದ 9 ದೇಶಗಳ 19 ಸಾಗರೋತ್ತರಖರೀದಿದಾರರ ಭಾಗವಹಿಸುವಿಕೆ)

ಹಸಿರು ಮಳಿಗೆಗಳನ್ನು ಪ್ರೋತ್ಸಾಹಿಸಲು ಎಕೊ ಡಿಸೈನ್ ಪ್ರಶಸ್ತಿ(63 ಸಂಸ್ಥೆಗಳ ಭಾಗವಹಿಸುವಿಕೆ)

ಉತ್ಪಾದನಾಕ್ವಿಜ್ ಸ್ಪರ್ಧೆ(ಉತ್ಪಾದನಾತಂತ್ರಜ್ಞಾನದಕುರಿತುಅಂತರ-ಕಾಲೇಜುಕ್ವಿಜ್)

ಜಾಗೃತಿ

ಉದ್ಘಾಟನಾ ಸಂದರ್ಭದಲ್ಲಿ ಸ್ವಾಗತ ಭಾಷಣ ಮಾಡುತ್ತಾ, ಐಎಮ್‌ಟಿಎಮ್‌ಎದ ಪ್ರದರ್ಶನ ವಿಭಾಗದಚೇರ್ಮನ್‌ಶ್ರೀ ಜಮ್ಶಿದ್‌ಎನ್. ಗೋದ್ರೆಜ್' ದೇಶದಲ್ಲಿ ಸವಾಲೊಡ್ಡುವಆರ್ಥಿಕ ಪರಿಸ್ಥಿತಿಗಳು ಇರುವ ಹೊರತಾಗಿಯೂ, ಇದುಈವರೆಗೆ ನಡೆದಿರುವ ನಮ್ಮಅತಿದೊಡ್ಡಇಮ್‌ಟೆಕ್ಸ್ ಫಾರ್ಮಿಂಗ್ ಕಾರ್ಯಕ್ರಮವಾಗಿದೆ.ಪ್ರಸ್ತುತಕಂಡುಬರುತ್ತಿರುವ ಆಟೋಮೊಬೈಲ್‌ಗಳ ಮಾರಾಟದಲ್ಲಿನಕಡಿತವುಒಂದುಜಾಗತಿಕ ಸಮಸ್ಯೆಯಾಗಿದ್ದುಇದನ್ನು ನಾವು ಅರ್ಥಮಾಡಿಕೊಳ್ಳಬೇಕಾದ ಅಗತ್ಯವೇರ್ಪಟ್ಟಿದೆಎಂದು ನಾನು ನಂಬಿದ್ದೇನೆ.''ಎಂದರು.

'ಇಮ್‌ಟೆಕ್ಸ್ ಫಾರ್ಮಿಂಗ್ 2020 &ಟೂಲ್‌ಟೆಕ್ 2020'ನ ಉದ್ಘಾಟನೆಯ ಸಂದರ್ಭದಲ್ಲಿ ಮಾತನಾಡುತ್ತಾ, ಐಎಮ್‌ಟಿಎಮ್‌ಎದಅಧ್ಯಕ್ಷ ಶ್ರೀ ಇಂದ್ರದೇವ್ ಬಾಬು, ''ಉತ್ಪಾದ ನಾಕ್ಷೇತ್ರವನ್ನು ಬಲಪಡಿಸುವುದಕ್ಕಾಗಿ ಭಾರತ ಸರ್ಕಾರವು ಕೈಗೊಳ್ಳುತ್ತಿರುವ ಕೆಲವೊಂದು ಉಪಕ್ರಮಗಳಿಂದಾಗಿ ನಾವು ಒಂದು ಹೊಸ ದಶಕದಅಂಚಿನಲ್ಲಿದ್ದು ಕೆಲವೊಂದುಧನಾತ್ಮಕ ಅಲೆಗಳ ಸೂಚನೆ ಗಳನ್ನು ನೋಡುತ್ತಿದ್ದೇವೆ. ಇವುಗಳಲ್ಲಿ ಕೆಲವು, ಅಂದರೆ, ಮೂಲಸೌಕರ್ಯ ಅಭಿವೃದ್ಧಿಗಾಗಿರೂ. 102 ಲಕ್ಷಕೋಟಿ ನಿಯೋಜನೆ, ಸುಲಭ ವ್ಯಾಪಾರವನ್ನು ಕೈಗೊಳ್ಳುವುದಕ್ಕಾಗಿ ಸಂಸ್ಥೆಗಳಿಗೆ ಬೇಸ್‌ಕಾರ್ಪೊ ರೇಟ್‌ತೆರಿಗೆಯಲ್ಲಿ ಮತ್ತು ಸಂಬಂಧಿತ ನೀತಿಗಳಲ್ಲಿ ಕಡಿತ ಮುಂತಾ ದವು ಬೆಳವಣಿಗೆಯನ್ನು ವರ್ಧಿಸಬ ಹುದು.''ಎಂದರು.

ತಮ್ಮ ಭಾಷಣದಲ್ಲಿ ಎಸಿಎಮ್‌ಎದ ತಕ್ಷಣದ ಮಾಜಿಅಧ್ಯಕ್ಷ ಶ್ರೀ ರಾಮ್ ವೆಂಕಟರಮಣಿ, ''ಯಂತ್ರ ಸಾಧನ ಉದ್ಯಮದಲ್ಲಿ ಬೆಳವಣಿಗೆಗಳನ್ನು ನೋಡುತ್ತಿರುವುದಕ್ಕೆ ಸಂತೋಷವಾಗುತ್ತಿದೆ ಹಾಗು ಬಳಕೆದಾರರಾಗಿ, ನಾವು ಅದರ ಬಗ್ಗೆ ಸಂತುಷ್ಟರಾಗಿದ್ದೇವೆ. ಆಟೋಮೊಬೈಲ್ ಹಾಗು ಆಟೋ ಬಿಡಿಭಾಗಕ್ಷೇತ್ರವುಯಂತ್ರಸಾಧನಉದ್ಯಮದ ಪ್ರಾಥಮಿಕ ಚಾಲನಾ ಅಂಶಗಳಾಗಿ ಮುಂದುವರಿಯಲಿವೆ.''ಎಂದರು.

ಉದ್ಘಾಟನೆಯಲ್ಲಿಆಟೋಮೊಬೈಲ್‌ಉದ್ಯಮದ ಬಗ್ಗೆ ತಮ್ಮ ಭಾಷಣ ಮಾಡುತ್ತಾ, ವೋಲ್ವೋಗ್ರೂಪ್‌ನಅಧ್ಯಕ್ಷ ಹಾಗು ವ್ಯವಸ್ಥಾಪಕ ನಿರ್ದೇಶಕ ಶ್ರೀ ಕಮಲ್ ಬಾಲಿ, ಇವಿಗಳು ಬೃಹತ್ ಪ್ರಮಾಣದಲ್ಲಿ ಪ್ರವೇಶಿಸುತ್ತಿರುವುದನ್ನು ಗಮನಿಸಿದರೆ ಬ್ಯಾಟರಿ ಎನ್‌ಕ್ಲೋಶರ್‌ಗಳು ಮತ್ತುಅಭಿವೃದ್ಧಿಯಲ್ಲಿ ಮೆಟಲ್ ಫಾರ್ಮಿಂಗ್ ಪ್ರಮುಖ ಪಾತ್ರ ವಹಿಸಲಿದ್ದು, ಇಮ್‌ಟೆಕ್ಸ್ ಫಾರ್ಮಿಂಗ್ ಪ್ರದರ್ಶನವು ಪರಿವರ್ತಕವಾಗಿಕಾರ್ಯನಿರ್ವ ಹಿಸಲಿದೆ.''ಎಂದರು.

ಉದ್ಘಾಟನೆಯ ಸಂದರ್ಭದಲ್ಲಿ ಮೆಟಲ್ ಫಾರ್ಮಿಂಗ್‌ನಲ್ಲಿರುವ ಪ್ರಸ್ತುತದ ಬೇಡಿಕೆ ಟ್ರೆಂಡ್‌ಗಳನ್ನು ಎತ್ತಿತೋರಿ ಸುವ'ಕಾಂಪ್ರಿಹೆನ್ಸಿವ್‌ರಿಪೋರ್ಟ್‌ಆನ್‌ಇಂಡಿಯನ್ ಮೆಟಲ್ ಫಾರ್ಮಿಂಗ್ ಇಂಡಸ್ಟ್ರಿ' ಮತ್ತು ಪ್ರದರ್ಶನ ವಿಷಯ ಪಟ್ಟಿ (ಕ್ಯಾಟಲಾಗ್) ಎಂಬ ಐಎಮ್‌ಟಿಎಮ್‌ಎದ ಪ್ರಕಟಣೆಗಳನ್ನು ಬಿಡುಗಡೆ ಮಾಡಲಾಯಿತು. ವಿನೋದ್ ದೋಶಿ ಅವರ ಸ್ಮರಣಾರ್ಥ ಕೊಡುವ' ಐಎಮ್‌ಟಿಎಮ್‌ಎ-ಪ್ರೀಮಿಯರ್ ಔಟ್‌ಸ್ಟ್ಯಾಂಡಿಂಗ್‌ಆಂತ್ರೊಪ್ರೆನ್ಯೂರ್' ಪ್ರಶಸ್ತಿಯನ್ನು ತ್ರಿಶೂಲ್ ಮಶೀನ್ ಟೂಲ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಸಿ.ಎಸ್. ಶಿವ ಶಂಕರಯ್ಯಅವರಿಗೆ ನೀಡಲಾಯಿತು. ಈ ಪ್ರದರ್ಶನದಲ್ಲಿಒಟ್ಟಾರೆ 40,000 ವ್ಯಾಪಾರ ಸಂದರ್ಶಕರು ಭಾಗವಹಿಸುತ್ತಾರೆಂದು ನಿರೀಕ್ಷಿಸಲಾಗಿದೆ. ಕಠಿಣವಾದ ಮಾರುಕಟ್ಟೆ ಪರಿಸ್ಥಿತಿಗಳು ಹಾಗು ಆರ್ಥಿಕ ಪರಿಸ್ಥಿತಿಯಲ್ಲಿ ಸಾಮಾನ್ಯ ನಿಧಾನಗತಿಇದ್ದ ಹೊರತಾಗಿಯೂ ಭಾರತದಯಂತ್ರ ಸಾಧನಉ ದ್ಯಮಕ್ಕೆ ವ್ಯಾಪಾರ ಬೆಳವಣಿಗೆಯನ್ನು ಮುಂದೂಡ ಲುಇಮ್‌ಟೆಕ್ಸ್ ಮಾರುಕಟ್ಟೆ ಮುಂದಾಳುವಾಗಿದೆ ಎಂಬುದನ್ನು ಕೂಡಇದುತೋರಿಸುತ್ತದೆ.ಕಾರ್ಯಕ್ರಮಕುರಿತಾದ ಹೆಚ್ಚಿನ ಮಾಹಿತಿಗಾVhttps://www.imtex.in/UÉ ಲಾಗ್‌ಆನ್ ಆಗಿ.

ಐಎಮ್‌ಟಿಎಮ್‌ಎಕುರಿತು

ಐಎಮ್‌ಟಿಎಮ್‌ಎ, ಭಾರತದಯಂತ್ರ ಸಾಧನಉದ್ಯಮದಕೇಂದ್ರ ಮಂಡಳಿ ಹಾಗು ಸಂಪರ್ಕದ ಏಕೈಕ ಕೇಂದ್ರವಾಗಿದೆ.ದೇಶದ ಲೋಹ ತಯಾರಿಕಾಉದ್ಯಮದ ಬೆಳವಣಿಗೆ ಹಾಗು ಅಭಿವೃದ್ಧಿಯಲ್ಲಿಐಎಮ್‌ಟಿಎಮ್‌ಎ ಮಹತ್ತರ ಪಾತ್ರ ವಹಿಸುತ್ತದೆ. ಐಎಮ್‌ಟಿಎಮ್‌ಎದ ಉಪಕ್ರಮಗಳು ನೀತಿ ಸಲಹೆ, ರಫ್ತು ಪ್ರೋತ್ಸಾಹ, ವ್ಯಾಪಾರ ಜಾತ್ರೆಗಳು, ಬೃಹತ್‌ಕಾರ್ಯಕ್ರಮಗಳು, ತರಬೇತಿ, ಸಮಾವೇಶಗಳು, ತಂತ್ರಜ್ಞಾನ ಮಿಶನ್‌ಗಳು, ಪ್ರಕಟಣೆಗಳು ಮುಂತಾದವನ್ನು ಒಳಗೊಂಡಿದೆ.1949ರಲ್ಲಿ ರಚನೆಯಾದ ಐಎಮ್‌ಟಿಎಮ್‌ಎದಲ್ಲಿ 450ಕ್ಕಿಂತ ಹೆಚ್ಚಿನ ಸದಸ್ಯರಿದ್ದುದೇಶದ ಸಂಘಟಿತಯಂತ್ರ ಸಾಧನ ಹಾಗು ತತ್ಸಂಬಂಧಿತ ಸಾಧನತಯಾರಕರ 90%ಅನ್ನು ಪ್ರತಿನಿಧಿಸುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಮಿಸ್. ಮನಾಲಿ ಸರ್ಕಾರ್?Manali.sarkar@madisonpr.in +91 9739640184
ಮಿಸ್. ಶ್ವೇತಾ ಡಿ'ಸೂಜಾ?Shweta.dsouza@madisonpr.in +91 9820401592

# ಕನ್ನಡದ ಜಗಜಟ್ಟಿ ಮಲ್ಲ



ನನ್ನ ಬಾಲ್ಯದ ಶಿಕ್ಷಣ ಹಂತದಲ್ಲಿ ಕನ್ನಡವನ್ನು ವ್ಯಾಕರಣಬದ್ಧವಾಗಿ ಕಲಿಸಿ ಅಕ್ಷರವನ್ನು ಶುದ್ಧವಾಗಿ, ದುಂಡಾಗಿ ಬರೆಯಲು ಪ್ರೇರಣೆ ನೀಡಿ ಕನ್ನಡ ಒಲವಿನ ಹಣತೆಯನ್ನು ಹಚ್ಚಿ ಅದನ್ನು ಪ್ರೀತಿಸುವಂತೆ ಭದ್ರಬುನಾದಿ ಹಾಕಿದವರು ಹನಗಂಡಿಯ ನನ್ನ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಗುರುಗಳು. ಇವರು ಹಣತೆ ಹಚ್ಚುವುದರಿಂದ ನನ್ನ ಮುಂದಿನ ಓದಿಗೆ ಪ್ರೇರಣೆಯಾದವರು. ನನ್ನ ಹೃದಯಾಂತರಾಳದಲ್ಲಿ ಅರಳಿದ ಕನ್ನಡ ಪ್ರೇಮದಿಂದ ನನ್ನನ್ನು ಕನ್ನಡಿಗನಾಗಿ ಭಾಷಾ ಅಭಿಮಾನ ಬೆಳೆಸಿದವರು ಕನ್ನಡದ ಜಗಜಟ್ಟಿ ಗುರುಗಳು.

ನನ್ನ ಪದವಿಯ ಮೊದಲ ದಿನ, ಮೊದಲೆರಡು ಇಂಗ್ಲೀಷಮಯ ಅವಧಿಯ ನಂತರ ತಂಗಾಳಿಯಂತೆ ನಮ್ಮನ್ನು ಸ್ವತಂತ್ರಗೊಳಿಸೊದ್ದು ಕನ್ನಡದ ಅವಧಿ. ಮನದಲ್ಲಿ ಕನ್ನಡದ ಅಭಿಮಾನ ಹೆಚ್ಚಾಗಿರುವುದರಿಂದ ವಿದ್ಯಾರ್ಥಿಗಳಿಂದ ತುಂಬಿದ ತರಗತಿ ಕನ್ನಡದ ಗುರುಗಳು ಕಾಲಿಟ್ಟಾಗ ಸಂತಸವಾಗಿತ್ತು. ಅವರು ಮಾತು ಆರಂಭಿಸಿದರು, ಆ ಒಂದರೆ ಕ್ಷಣ ಕಣ್ಣು ಮುಚ್ಚಿ ಆಲಿಸಿದೆ. ಅವರ ಧ್ವನಿ, ಮಾತಿನ ಶೈಲಿ, ಅಲ್ಲಲ್ಲಿ ಸಮಯೋಚಿತ ಹಾಸ್ಯ, ಪಾಠದ ಮಧ್ಯ ಡಾ. ರಾಜಕುಮಾರ ಅವರ ಡೈಲಾಗ್ ಗಳು ತರಗತಿಯ ಎಲ್ಲ ವಿದ್ಯಾರ್ಥಿಗಳ ಗಮನಸೆಳೆದವು. ಕುಸ್ತಿ ಪೈಲವಾನರಾಗಿ ದೇಹ ಭೀಮನ ಆಕಾರವಿದ್ದರೂ ಕರ್ಣನಂತ ಉದಾತ್ತಗುಣಗಳಿಂದಾ ಅವರ ಕನ್ನಡ ಅಭಿಮಾನ ಪ್ರೀತಿಗೆ ಎಲ್ಲರೂ ಶರಣಾದೆವು. ಈ ಒಂದು ಅವಧಿಯ ಪಾಠ ಕೇಳಿದ ಎಷ್ಟೋ ವಿದ್ಯಾರ್ಥಿಗಳು ತಮ್ಮ ಐಚ್ಛಿಕ ವಿಷಯಗಳನ್ನು ಬದಲಿಸಿ ಕನ್ನಡ ವಿಷಯವನ್ನು ಆರಿಸಿಕೊಂಡು ಅಧ್ಯಯನ ಆರಂಭಿಸಿದರು. ಮೂರು ವರ್ಷದ ಪದವಿ ಅವಧಿಯಲ್ಲಿ ಗಂಧ ಸೂಸಿದರು ನನ್ನಂತ ಸಾವಿರಾರು ವಿದ್ಯಾರ್ಥಿಗಳ ಎದೆಯಲ್ಲಿ ಕನ್ನಡದ ಹಣತೆ ಹಚ್ಚಿದರು. ಕಥೆ, ಕವನ ಬರೆಸಿ ಭಾಷಣದ ಗಂಧ ಸೂಸಿ ಬರವಣಿಗೆಯ ಅಂದ ಹೆಚ್ಚಿಸಿದರು.

ಕಬ್ಬಿಣದ ಕಡಲೆಯಂತಿದ್ದ ಹಳೆಗನ್ನಡವನ್ನು ಸುಲಿದ ಬಾಳೆ ಹಣ್ಣಿನಂತಿ ಸುಲಭವಾಗಿ, ನೀರು ಕುಡಿದಷ್ಟು ಸರಳವಾಗಿ ಹೇಳಿ ಪಾಠದಲ್ಲಿನ ವಿಷಯಕ್ಕೆ ತಕ್ಕಂತೆ ಉದಾಹರಣೆಗಳು, ಕನ್ನಡ ಸಂಸ್ಕೃತಿಯ ಇತಿಹಾಸ, ವ್ಯಾಕರಣ, ಸಾಹಿತ್ಯ, ವಿಷಯ ವಿವರಿಸುವ ಹಾವಭಾವ ಶೈಲಿಯಿಂದ ನೈಜ ಚಿತ್ರಣ ಕಣ್ಣುಮುಂದೆ ಬರುತ್ತಿತ್ತು. ಇವರ ಪಾಠ ಕೇಳಲು ಬೇರೆ ವಿಷಯದ ವಿದ್ಯಾರ್ಥಿಗಳು ಅಕ್ಕರೆ ಇಂದ ಬರುವರು. ಪಾಠ ಹೇಳುವುದರ ಜೊತೆಗೆ ಜೀವನಾನುಭವಗಳನ್ನು ನಮ್ಮ ಮುಂದೆ ತೆರೆದಿಡುತ್ತಿದ್ದರು ನಮ್ಮ ಸುತ್ತ ಮುತ್ತಲಿನ ವಾಸ್ತವ ಸಮಾಜದ ಬಗ್ಗೆ ಅರಿವು ಮೂಡಿಸುತ್ತಿದ್ದರು.

ನೊಂದವರಿಗೆ ಕಣ್ಣಿರೊರೆಸುವ ಮನೋಭಾವ ಬೆಳೆಸುವುದರ ಜೊತೆಗೆ ಎಲ್ಲದಕ್ಕಿಂತ ಹೆಚ್ಚಾಗಿ ಬದುಕು ಕಟ್ಟುವ ಕಲೆಯನ್ನು ಕಲಿಸಿದವರು. ಅವರ ವಿದ್ಯಾರ್ಥಿಯಾಗಿದ್ದು ನನ್ನ ಅದೃಷ್ಟ. ನನ್ನ ಗುರುಗಳು ತಮ್ಮ ಜೀವನದುದ್ದಕ್ಕೂ ಕನ್ನಡಕ್ಕಾಗಿ, ಕನ್ನಡ ಉಳಿವಿಗಾಗಿ ಜೀವನ ಸವೆಸಿದ ಮಹಾನ್ ತ್ಯಾಗಿಗಳು ಅವರು ಬೇರೆ ಯಾರೂ ಅಲ್ಲಾ ಅವರೇ ಡಾ. ಎಸ್.ಬಿ.ಮಟೋಳಿ ಗುರುಗಳು. ಇವತ್ತು ನನ್ನ ಬರವಣಿಗೆಗೆ ಕಾರಣರಾದ ನನ್ನ ಅಚ್ಚು ಮೆಚ್ಚಿನ ಗುರುಗಳು. ಈಗಲೂ ಸದಾ ನನ್ನ ಮಾರ್ಗದರ್ಶಕರಾಗಿರುವ ನನ್ನ ಪ್ರೀತಿಯ ಕನ್ನಡ ವಿಷಯದ ಗುರಗುಗಳಾಗಿರುವ ನನ್ನ ಪ್ರೀತಿಯ ಮಟೋಳಿ ಗುರುಗಳಿಗೆ ನನ್ನ ಹೃದಯ ಪೂರ್ವಕ ಅನಂತಕೋಟಿ ನಮನಗಳು.

ಹೆಮ್ಮೆಯಿಂದ ಹೇಳುವೆ ನಾನೊಬ್ಬ ಭಾರತೀಯನೆಂದು, ಎದೆ ತಟ್ಟಿ ಹೇಳುವೆ ನಾನೊಬ್ಬ ಕನ್ನಡಿಗನೆಂದು...



- ರಮೇಶ ಇಟಗೋಣಿ

Editor, Publisher,printer, And Owned By N.raju, 2nd Main, Janatha Qts, B.v.raman Nagar, Hunasamaranahalli, Bangalore North -562157,Published At 2nd Main, Janatha Qts, B.v.raman Nagar, Hunasamaranahalli, Bangalore North -562157, Printed At SLN Printer & Publisher At 2nd Main, Janatha Qts, B.v.raman Nagar, Hunasamaranahalli, Bangalore North -562157,editor : N.Raju, Mob : 9481473219, Rni No : Karkan/2015/65497